# ನಾಲ್ಕು ರಥಗಳು

## ಅಧ್ಯಯನ # 40




## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 40

# ನಾಲ್ಕು ರಥಗಳು

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

**ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.**

ಇಂದು ನಾವು ಹಳೆಯ ಒಡಂಬಡಿಕೆಯ ಜೆಕರ್ಯ ಪುಸ್ತಕದಲ್ಲಿ ಕಂಡುಬರುವ ಪ್ರವಾದನಾ ದರ್ಶನವನ್ನು ಕುರಿತು ನೋಡಲಿದ್ದೇವೆ.

ಈಗ ನಾವು ಕೆಳಗಿನ ವಾಕ್ಯವನ್ನು ನೋಡೋಣ –

**ಜೆಕರ್ಯ 6:1-8**

**"ಪುನಃ ನಾನು ಕಣ್ಣೆತ್ತಿನೋಡಲು ಇಗೋ, ಎರಡು ಬೆಟ್ಟಗಳ ನಡುವೆಯಿಂದ ಬರುತ್ತಿರುವ ನಾಲ್ಕು ರಥಗಳು ಕಾಣಿಸಿದವು, ಆ ಬೆಟ್ಟಗಳು ತಾಮ್ರದವುಗಳು. ಮೊದಲನೆಯ ರಥಕ್ಕೆ ಕೆಂಪು ಕುದುರೆಗಳು, ಎರಡನೆಯ ರಥಕ್ಕೆ ಕಪ್ಪು ಕುದುರೆಗಳು, ಮೂರನೆಯ ರಥಕ್ಕೆ ಬಿಳಿ ಕುದುರೆಗಳು, ನಾಲ್ಕನೆಯ ರಥಕ್ಕೆ ಮಚ್ಚೆ ಮಚ್ಚೆಯ ಬಲವಾದ ಕುದುರೆಗಳು ಕಟ್ಟಿದ್ದವು ವಿವರಿಸುವ ದೇವದೂತನನ್ನು - ಸ್ವಾಮೀ, ಇವುಗಳು ಏನು ಎಂದು ನಾನು ಪ್ರಸ್ತಾಪವೆತ್ತಿ ಕೇಳಲು ಆ ದೇವದೂತನು ನನಗೆ - ಇವು ಆಕಾಶದ ನಾಲ್ಕು ಗಾಳಿಗಳು; ಭೂಲೋಕದೊಡೆಯನ ಸನ್ನಿಧಾನದಲ್ಲಿ ನಿಂತಿದ್ದು ಅಲ್ಲಿಂದ ಹೊರಟು ಬರುತ್ತಾ ಇವೆ ಎಂದುತ್ತರ ಕೊಟ್ಟನು. ಅನಂತರ ಕಪ್ಪು ಕುದುರೆಗಳು ಉತ್ತರದೇಶಕ್ಕೆ ಹೊರಟವು. ಬಿಳಿ ಕುದುರೆಗಳು ಅವುಗಳನ್ನು ಹಿಂಬಾಲಿಸಿದವು. ಮಚ್ಚೆ ಮಚ್ಚೆಯ ಕುದುರೆಗಳು ದಕ್ಷಿಣದೇಶಕ್ಕೆ ಹೋದವು. ಕೆಂಪು ಕುದುರೆಗಳು ಒಂದು ಲೋಕದಲ್ಲಿ ಸಂಚರಿಸುವದಕ್ಕೆ ಹೊರಡಬೇಕೆಂದು ತ್ವರೆಪಟ್ಟವು; ಅವನು - ಹೊರಡಿರಿ, ಲೋಕದಲ್ಲಿ ಸಂಚರಿಸಿರಿ ಎಂದಪ್ಪಣೆ**

ಮಾಡಲು ಅವು ಲೋಕದಲ್ಲಿ ಸಂಚರಿಸಿದವು ಸಂಚರಿಸಿರಿ. ಆ ಮೇಲೆ ಅವನು ನನಗೆ - ಆಹಾ, ಉತ್ತರ ದೇಶಕ್ಕೆ ಹೋದವುಗಳು ಅಲ್ಲಿ ನನ್ನ ಕೋಪವನ್ನು ಶಾಂತಿಗೊಳಿಸಿವೆ ಎಂದು ಕೂಗಿ ಹೇಳಿದನು."

**ಇಲ್ಲಿ ನಾವು ಪ್ರವಾದಿಯಾದ ಜೆಕರ್ಯನಿಗೆ ತೋರಿಸಿದ ದರ್ಶನವನ್ನು ಕುರಿತು ಓದುತ್ತೇವೆ.**

ಇದರಲ್ಲಿ ನಾವು ನೋಡುವದೇನೆಂದರೆ –

"ಎರಡು ಬೆಟ್ಟಗಳ ನಡುವೆಯಿಂದ ಬರುತ್ತಿರುವ ನಾಲ್ಕು ರಥಗಳು ಕಾಣಿಸಿದವು, ಆ ಬೆಟ್ಟಗಳು ತಾಮ್ರದವುಗಳು."

**ಈ ನಾಲ್ಕು ರಥಗಳು ಎಂದರೇನು ?**

**ಈ ವಿಧವಿಧವಾದ ಕುದುರೆಗಳ ಬಣ್ಣಗಳು ಏನ್ನನ್ನು ಸೂಚಿಸುತ್ತದೆ?**

**ಈ ದರ್ಶನದ ಅರ್ಥವೇನು?**

ಮೊದಲನೆಯದಾಗಿ ಈ ವಾಕ್ಯದ ಸಾಲುಗಳನ್ನು ನೋಡುವಾಗ ನಮಗೆ ಮನವರಿಕೆಯಾಗುವದೇನೆಂದರೆ ಇಲ್ಲಿ ಉಪಯೋಗಿಸಿರುವದು ನೇರವಾದ ಭಾಷೆಯಲ್ಲ ಆದರೆ ಇದು ಪ್ರವಾದನೆಗಳನ್ನು ವಿವರಿಸುವ ಭಾಷೆಯನ್ನು ಬಲಸಲಾಗಿದೆ.

ಹೌದು! ನಾವು "ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸು"ವಾಗ ನಮಗೆ ಮನವರಿಕೆಯಾಗುವದು ಏನೆಂದರೆ,

.......ಇಲ್ಲಿ ಉಪಯೋಗಿಸಿರುವದು ಸಾಂಕೇತಿಕ ಭಾಷೆ

ಹಾಗಾದರೆ ಈಗ ಈ ಸಂಕೇತಗಳ ಅರ್ಥವೇನೆಂದು ನೋಡೋಣ –

**ಜೆಕರ್ಯ 6:1**

**"ಪುನಃ ನಾನು ಕಣ್ಣೆತ್ತಿ.... ನೋಡಲು....."**

ಇದು ಪ್ರವಾದನೆಯ ಆರಂಭವನ್ನು ಸೂಚಿಸುತ್ತದೆ!

"ಪುನಃ ನಾನು ಕಣ್ಣೆತ್ತಿ" ಎಂಬ ಪದಗಳು ಪ್ರವಾದಿಯಾದ ಜೆಕರ್ಯನ ಜೀವಿತ ಕಾಲದಲ್ಲಿ ಈ ದರ್ಶನದ ವಿಷಯವು ಮೊದಲೇ ಆರಂಭವಾಗಿದೆ ಎಂದು ಸೂಚಿಸುತ್ತದೆ.

ಈಗ ನಾವು ಕೆಳಗಿನ ವಾಕ್ಯವನ್ನು ಓದಿ ಮುಂದುವರಿಯೋಣ –

**ಜೆಕರ್ಯ 6:1**

**"...ಇಗೋ, ಎರಡು ಬೆಟ್ಟಗಳ ನಡುವೆಯಿಂದ ಬರುತ್ತಿರುವ ನಾಲ್ಕು ರಥಗಳು ಕಾಣಿಸಿದವು, ಆ ಬೆಟ್ಟಗಳು ತಾಮ್ರದವುಗಳು."**

**ಎನ್.ಐ.ವಿ.** ಭಾಷಾಂತರದಲ್ಲಿ ನಾವು ನೋಡುವದೇನೆಂದರೆ –

"ಆ ಬೆಟ್ಟಗಳು ಕಂಚುದವುಗಳು" **(bronze)**

**ಇಲ್ಲಿ ಯಾವ ಲೋಹವನ್ನು ಕುರಿತು ಸೂಚಿಸಲಾಗಿದೆ?**

**ಹಿತ್ತಾಳೆಯಾ ಅಥವಾ ಕಂಚುನಾ?**

ಇಬ್ರಿಯ ಪದವನ್ನು ಅಧ್ಯಯನ ಮಾಡಿ ನೋಡಿದಾಗ ಅದರಿಂದ ಭಾಷಾಂತರಿಸಿದ ಪದೇ ಯಾವುದೆಂದರೆ–

"ನೆಖೊಷೇತ್"( **nechosheth** ) (ಸ್ಟ್ರಾಂಗ್ಸ್ ಇಬ್ರಿಯ#5178)

ಅಂದರೆ ತಾಮ್ರದ ಲೋಹ.

**ಆದ್ದರಿಂದ ಇವು "ತಾಮ್ರದ ಬೆಟ್ಟಗಳಾಗಿದ್ದವು"**



ಈಗ ಆ ಸಂಕೇತಗಳು ಏನ್ನನ್ನು ಸೂಚಿಸುತ್ತದೆ ಎಂದು ನೋಡೋಣ –

## "ಬೆಟ್ಟಗಳು"

ಇಲ್ಲಿ ಕೊಟ್ಟಿರುವ ಸತ್ಯವೇದದ ಪದವು ರಾಜ್ಯವನ್ನು ಸೂಚಿಸುತ್ತದೆ. ಇದನ್ನು ನಾವು ದಾನಿಯೇಲನು 2:44,45 ರಲ್ಲಿ ನೋಡುತ್ತೇವೆ –

**"ಆ ರಾಜರ ಕಾಲದಲ್ಲಿ ಪರಲೋಕದೇವರು ಒಂದು ರಾಜ್ಯವನ್ನು ಸ್ಥಾಪಿಸುವನು; ಅದು ಎಂದಿಗೂ ಅಳಿಯದು, ಅದರ ಪ್ರಾಬಲ್ಯವು ಬೇರೆ ಜನಾಂಗಕ್ಕೆ ಕದಲಿಹೋಗದು, ಆ ರಾಜ್ಯಗಳನ್ನೆಲ್ಲಾ ಭಂಗಪಡಿಸಿ ನಿರ್ನಾಮ ಮಾಡಿ ಶಾಶ್ವತವಾಗಿ ನಿಲ್ಲುವದು. (ಬೆಟ್ಟದೊಳಗಿಂದ) ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು ಕಬ್ಬಿಣ ತಾಮ್ರ ಮಣ್ಣು ಬೆಳ್ಳಿ ಬಂಗಾರಗಳನ್ನು ಚೂರುಚೂರುಮಾಡಿದ್ದು ನಿನ್ನ ಕಣ್ಣಿಗೆ ಬಿತ್ತಲ್ಲಾ; ಇದರಿಂದ ಪರಲೋಕದೇವರು ಮುಂದೆ ನಡೆಯುವ ವಿಷಯಗಳನ್ನು ರಾಜನಿಗೆ ತಿಳಿಯಪಡಿಸಿದ್ದಾನೆ; ಕನಸು ನಿಜ, ಅದರ ಅರ್ಥವು ನಂಬತಕ್ಕದು ಎಂದು ಹೇಳಿದನು."**

ಇಲ್ಲಿ "**ಬೆಟ್ಟಗಳು**" ಎಂಬುದು ಬಹುವಚನವಾಗಿದೆ, ಇದು "**ಎರಡು ರಾಜ್ಯಗಳನ್ನು**" ಸೂಚಿಸುತ್ತದೆ–

ನಂತರ ಅವು

"**ತಾಮ್ರ**" ಎಂದು ಓದುತ್ತೇವೆ.

ಈ ತಾಮ್ರದ ಲೋಹವನ್ನು ದೇವದರ್ಶನದ ಗುಡಾರದ ಪ್ರಾಕಾರದಲ್ಲಿ ಎರಡು ವಸ್ತುವಾಗಿ ಉಪಯೋಗಿಸಿರುವದನ್ನು ನೋಡುತ್ತೇವೆ –

## ಯಜ್ಞವೇದಿ ಮತ್ತು ಗಂಗಾಳ

**(BRAZEN ALTAR and LAVER)**

ಈ ಗುಡಾರವು ಒಂದು ಸ್ಥಳವಾಗಿ ಸೂಚಿಸಲಾಗಿದ್ದು ಮನುಷ್ಯನ ಪರಿಪೂರ್ಣತೆಯ ಸ್ಥಿತಿ ಅಥವಾ ತಮ್ಮ ಪಾಪಗಳಿಂದ ಪರಿಹಾರ ಹೊಂದಿರುವಂತಹ ನೀತಿವಂತನ ಸ್ಥಿತಿಯನ್ನು ಸೂಚಿಸುತ್ತದೆ.





ಆದ್ದರಿಂದ ಇಲ್ಲಿ "ತಾಮ್ರ"ವು ಪರಿಪೂರ್ಣ ಮನುಷ್ಯ ಅಥವಾ ಪರಿಪೂರ್ಣ ಮಾನವ ಸ್ಥಿತಿಯನ್ನು ಸೂಚಿಸುತ್ತದೆ.

ಇದಲ್ಲದೆ "ತಾಮ್ರ"ವು ಬಂಗಾರದ ಸ್ವರೂಪದಂತೆ ಕಾಣುತ್ತಿದ್ದು,

**“ಮನುಷ್ಯನು ದೇವಸ್ವರೂಪದಲ್ಲಿ ಉಂಟಾದನು”**

ಎಂಬುದನ್ನು ಸೂಚಿಸುತ್ತದೆ (ಆದಿಕಾಂಡ 1:26).

**ಆದ್ದರಿಂದ ತಾಮ್ರ(ಪರಿಪೂರ್ಣ ಮಾನವ ಸ್ವಭಾವವು) ನೋಡಲು ಬಂಗಾರ ದಂತಿದೆ(ದೇವರ ಸ್ವಭಾವ).**

ಆದ್ದರಿಂದ ಈ " ತಾಮ್ರದ ಎರಡು ಬೆಟ್ಟಗಳು" –

**ಪರಿಪೂರ್ಣ ಮಾನವ ಸ್ವಭಾವದ ಎರಡು ರಾಜ್ಯಗಳನ್ನು ಸೂಚಿಸುತ್ತದೆ.**

**ಈಗ ನಮಗೆ ಬರುವ ಪ್ರಶ್ನೆ ಅವು ಯಾವದು?**

ನಂತರ ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಆದಿಕಾಂಡ 1:26**

**"ಮತ್ತು ದೇವರು - ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು."**



1. ಇದು ಆದಾಮನಿಗೆ ಕೊಟ್ಟಂತಹ ಮೊದಮೊದಲ ಮತ್ತು ನಿಜವಾದ ಭೂಮಿಯ ರಾಜ್ಯತ್ವ ಮತ್ತು ಆಳ್ವಿಕೆಯಾಗಿದೆ ಮತ್ತು ಇದನ್ನು ಈ ಕೆಳಗಿನ ವಾಕ್ಯಗಳಲ್ಲಿ ಸೂಚಿಸಲಾಗಿದೆ –

**ಕೀರ್ತನೆ 8:5 - "ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ."**

ಹೌದು! ಇಲ್ಲಿ "ಪ್ರಭಾವವನ್ನೂ ಮಾನವನ್ನೂ" ಎ ದರೆ...

ಈ ಭೂಮಿಯ ಮೇಲೆ ರಾಜತ್ವ ಮತ್ತು ಪ್ರಭುತ್ವವನ್ನು ಸೂಚಿಸುತ್ತದೆ. ಆದರೆ ಭೂಮಿಯ ರಾಜ್ಯತ್ವವನ್ನು ಪಡೆದುಕೊಂಡ ಸ್ವಲ್ಪ ಕಾಲದಲ್ಲಿಯೇ ಆದಾಮನು ಪಾಪ ಮಾಡಿದ ನಿಮಿತ್ತ ಅದನ್ನು ಕಳೆದುಕೊಂಡನು.

**ಆದ್ದರಿಂದ ಪರಿಪೂರ್ಣ ಮನುಷ್ಯ ಸ್ವಭಾವದ ಮೊದಲ ರಾಜ್ಯವು ಅಥವಾ "ಮೊದಲ ತಾಮ್ರದ ಬೆಟ್ಟವು" ಇದಾಗಿದೆ.**

**2.** ಎರಡನೆಯ ಬೆಟ್ಟದ ವಿವರಗಳನ್ನು ಕುರಿತು ಹೀಗೆ ಓದುತ್ತೇವೆ –

**ಮತ್ತಾಯ 25:34 / ಪ್ರಕಟನೆ 22:5**

**"ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ - ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ."**

**"ದೇವರಾದ ಕರ್ತನೇ ಅವರಿಗೆ ಬೆಳಕನ್ನು ಕೊಡುವನು; ಅವರು ಯುಗಯುಗಾಂತರಗಳಲ್ಲಿಯೂ ಆಳುವರು."**

ಈ ವಾಕ್ಯಗಳು ಸಮಸ್ತವನ್ನು ಸರಿಮಾಡಿದ ನಂತರ ಈ ಭೂಮಿಯ ರಾಜ್ಯಾಧಿಕಾರವನ್ನು – **"ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ"** ಎಂಬ ವಾಕ್ಯದ ಪ್ರಕಾರ

**ಎಲ್ಲಾ ಮನುಷ್ಯಜಾತಿಗಳಿಂದ ಇರುವ "ಕುರಿ" ವರ್ಗಗಳಿಗೆ ಕೊಡಲಾಗುವದು ಎಂದು ಸೂಚಿಸುತ್ತದೆ!**



ಹೌದು! ಸಾತ್ವಿಕ ಮತ್ತು ವಿಧೇಯರಾಗಿರುವವರು ಸಾವಿರ ವರುಷದ ಆಳ್ವಿಕೆಯಲ್ಲಿ ಪರಿಪೂರ್ಣ ಮಾನವಕುಲವಾಗಿ ಹೊಂದಿ "ಪರಿಶುದ್ಧರಾಜಮಾರ್ಗ"ದಲ್ಲಿ ನಡೆಯುವರು!!

ಹೌದು! ಇದು ಪರಿಪೂರ್ಣ ಮಾನವಕುಲದ ಎರಡನೆಯ ರಾಜ್ಯವಾಗಿರುವದು.

**ಮತ್ತು.... ಇದು ಎರಡನೆಯ "ತಾಮ್ರದ ಬೆಟ್ಟ"ವಾಗಿರುವದು.**

ಈಗ ಈ ಎರಡು **"ಬೆಟ್ಟಗಳ"** ಅಥವಾ ರಾಜ್ಯಗಳ ನಡುವೆ ಇರುವ ಕಾಲವನ್ನು ಇಲ್ಲಿ "ಕಣಿವೆ" ಎಂದು ಸೂಚಿಸಲಾಗಿದೆ ಮತ್ತು ನಾವು ಹೀಗೆ ಓದುತ್ತೇವೆ –

**"ಇಗೋ, ಎರಡು ಬೆಟ್ಟಗಳ ನಡುವೆಯಿಂದ ಬರುತ್ತಿರುವ ನಾಲ್ಕು ರಥಗಳು ಕಾಣಿಸಿದವು."**

**ಈ "ಕಾಲ"ವು ಏನ್ನನ್ನು ಸೂಚಿಸುತ್ತದೆ?**

ಇದು ಏದೆನ್ ತೋಟದಲ್ಲಿ ಆದಾಮನು ಬಿದ್ದುಹೋದದ್ದರಿಂದ 1000 ವರ್ಷದ ಯುಗದ ಕೊನೆಯಲ್ಲಿ ಸಮಸ್ತವು ಸರಿಯಾಗುವ ಕಾಲದವರೆಗೂ ಸೂಚಿಸುತ್ತದೆ.

ಇದನ್ನು ಸತ್ಯವೇದದಲ್ಲಿ ಹೀಗೆ ಸೂಚಿಸಲಾಗಿದೆ –

**"ದೇವರು.... ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು."** (**ಆದಿಕಾಂಡ** 2:2)

**ಇದು ಎಷ್ಟು ಕಾಲ ಉಳ್ಳದ್ದಾಗಿದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಬನು 5:19**

**"ಆರು ಇಕ್ಕಟ್ಟುಗಳಿಂದ ಆತನು ನಿನ್ನನ್ನು ಬಿಡಿಸುವನು; ಏಳನೆಯ ಇಕ್ಕಟ್ಟು ಉಂಟಾದರೂ ಯಾವ ಕೇಡೂ ನಿನ್ನನ್ನು ಮುಟ್ಟದು."**

ಇದು ದೇವರ **"ಏಳು"** ಯೋಜನೆಗಳನ್ನು ಕುರಿತು ಮಾತನಾಡುತ್ತದೆ!!

**"ಆರು"** ಇಕ್ಕಟ್ಟುಗಳಿಗಾಗಿ ಮತ್ತು **"ಏಳನೆ"** ಯದು ಬಿಡುಗಡೆಗಾಗಿ

ಹೌದು! ಈ ವಾಕ್ಯವು "ಏಳು" ಕಾಲಗಳ ಅಥವಾ ತಲಾ 1000 ವರ್ಷಗಳ ಏಳು "ದಿನಗಳ" ದೇವರ ದೈವೀಕ ಯೋಜನೆಯನ್ನು ಕುರಿತು ಮಾತನಾಡುತ್ತದೆ!!

ಈಗ ಆ ದರ್ಶನದ ಚಿತ್ರನವನ್ನು ಕೆಳಗೆ ಕೊಟ್ಟಿರುವುದನ್ನು ನೋಡೋಣ–



ಈ "**ಎರಡು ಬೆಟ್ಟಗಳ**" ನಡುವಿನಿಂದಲೇ ಆ "ನಾಲ್ಕು ರಥಗಳು" ಹೊರಟುಬಂದಿತು.

ಕೀರ್ತನೆ 23:4ರಲ್ಲಿ ಇದನ್ನು ಹೀಗೆ ಕರೆಯಲಾಗಿದೆ –

**"ಕಾರ್ಗತ್ತಲಿನ ಕಣಿವೆಯಲ್ಲಿ (ಮರಣಾಂಧಕಾರದ)"**



....ಯಾವಾಗ ಆದಾಮನ ಮರಣ ದಂಡನೆಯ "**ನೆರಳು (ಛಾಯೆ)**" ಎಲ್ಲಾ ಮನುಷ್ಯಜಾತಿಯ ಮೇಲೆ ಬಿತ್ತೋ ಆಗ ಎಲ್ಲರೂ ಸಹ ಈ ಮರಣದಂಡನೆಯನ್ನು ಸ್ವಾಸ್ಥ್ಯವಾಗಿ ಪಡೆದುಕೊಂಡರು!!

**ಆಹ್! ಈ ಸಾಂಕೇತಿಕ ಭಾಷೆಯುಳ್ಳ ದೇವರ ವಾಕ್ಯವು ಎಷ್ಟು ಅದ್ಭುತವಾಗಿದೆ!!**

**ಈಗ ನಾವು ಈ "ನಾಲ್ಕು ರಥಗಳನ್ನು" ಕುರಿತು ನೋಡೋಣ!**

ಈಗ ನಾವು ಕೆಳಗಿನ ವಾಕ್ಯವನ್ನು ಓದೋಣ –

**ಜೆಕರ್ಯ 6:2-3**

**"ಮೊದಲನೆಯ ರಥಕ್ಕೆ ಕೆಂಪು ಕುದುರೆಗಳು, ಎರಡನೆಯ ರಥಕ್ಕೆ ಕಪ್ಪು ಕುದುರೆಗಳು, ಮೂರನೆಯ ರಥಕ್ಕೆ ಬಿಳಿ ಕುದುರೆಗಳು, ನಾಲ್ಕನೆಯ ರಥಕ್ಕೆ ಮಚ್ಚೆ ಮಚ್ಚೆಯ ಬಲವಾದ ಕುದುರೆಗಳು ಕಟ್ಟಿದ್ದವು"**

ಇಲ್ಲಿ ಮೊದಲು ನಾವು ಗಮನಿಸಬೇಕಾದದ್ದು ಏನೆಂದರೆ ಆ ನಾಲ್ಕು ರಥಗಳು ಒಂದು ಕ್ರಮದಲ್ಲಿ ಕೊಡಲಾಗಿದೆ.

ಎರಡನೆಯದಾಗಿ ಈ ರಥಗಳಲ್ಲಿ ಇರುವ ಕುದುರೆಗಳಿಗೆ ಬೇರೆ ಬೇರೆ ಬಣ್ಣಗಳಿವೆ.



## ಈಗ ನಮಗೆ ಉಂಟಾಗುವ ಪ್ರಶ್ನೆ ಏನೆಂದರೆ– ಈ ರಥಗಳು ಏನು ಅರ್ಥ ನೀಡುತ್ತದೆ?

ಆಕಸ್ಮಿಕವಾಗಿ **(incidentally)** ಇದೇ ಪ್ರಶ್ನೆಯನ್ನು ಪ್ರವಾದಿಯಾದ ಜೆಕರ್ಯನೂ ಸಹ ಕೇಳಿದನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಜೆಕರ್ಯ 6:4**

**"ವಿವರಿಸುವ ದೇವದೂತನನ್ನು - ಸ್ವಾಮೀ, ಇವುಗಳು ಏನು? ಎಂದು ನಾನು ಪ್ರಸ್ತಾಪವೆತ್ತಿ ಕೇಳಲು"**

 ಪ್ರವಾದಿಯ ಈ ಕುತೂಹಳವುಳ್ಳ ಪ್ರಶ್ನೆ ನಮಗೂ ಉಂಟಾಗಿದೆ!

ಮತ್ತು ದೇವದೂತನು ಇದಕ್ಕೆ ಹೀಗೆ ಉತ್ತರ ಕೊಟ್ಟನೆಂದು ಓದುತ್ತೇವೆ –

**ಜೆಕರ್ಯ 6:5**

**"ಆ ದೇವದೂತನು ನನಗೆ - ಇವು ಆಕಾಶದ ನಾಲ್ಕು ಗಾಳಿಗಳು; ಭೂಲೋಕದೊಡೆಯನ ಸನ್ನಿಧಾನದಲ್ಲಿ ನಿಂತಿದ್ದು ಅಲ್ಲಿಂದ ಹೊರಟು ಬರುತ್ತಾ ಇವೆ ಎಂದುತ್ತರ ಕೊಟ್ಟನು."**

ಎಂತಹ ವಿಚಿತ್ರವಾದ ಉತ್ತರ!

## ಇದರ ಅರ್ಥವೇನು?

ಎನ್.ಐ.ವಿ. ಸತ್ಯವೇದದಲ್ಲಿ "ಸ್ಪಿರಿಟ್ಸ್" **(spirits)** ಎಂಬುದಕ್ಕೆ ಕೆಲಟಿಪ್ಪಣಿಯಲ್ಲಿ **(footnote)** "ಗಾಳಿಗಳು" ಎಂದು ಓದುತ್ತೇವೆ.

ಇಬ್ರಿಯದಲ್ಲಿ ಇದನ್ನು –

## "ರೂವಾಖ್" (ruwach)

ಎಂಬ ಪದದಿಂದ ಭಾಷಾಂತರಿಸಲ್ಪಟ್ಟಿದೆ **(Strong's Hebrew # 7307)**

ಮತ್ತು ಇದರ ಅರ್ಥ "ಜೀವಶ್ವಾಸ" ಎಂದಾಗುತ್ತದೆ.

ಇದೇ ಪದವನ್ನು ಕೆಳಗಿನ ವಾಕ್ಯದಲ್ಲಿ ಉಪಯೋಗಿಸಲಾಗಿದೆ.

**ಯೋಬನು 12:10**

**"ಆತನ ಕೈಯಲ್ಲಿ ಎಲ್ಲಾ ಜೀವಿಗಳ ಪ್ರಾಣವೂ ಎಲ್ಲಾ ಮನುಷ್ಯರ ಶ್ವಾಸವೂ ಇವೆ."**

ಹೌದು! "ಸ್ಪಿರಿಟ್" ಎಂದರೆ "ಗಾಳಿಗಳು" ಎಂದರ್ಥ ಇದು "ಜೀವ ಶ್ವಾಸವನ್ನು" ಸೂಚಿಸುತ್ತದೆ.

**ಹಾಗಾದರೆ, ಹೇಗೆ ಈ "ನಾಲ್ಕು ರಥಗಳನ್ನು" .... ದೇವರ ಸನ್ನಿಧಿಯ "ನಾಲ್ಕು ಜೀವಶ್ವಾಸಗಳು" ಅಥವಾ "ಗಾಳಿ ಗಳು"ಎಂದು ತೆಗೆದುಕೊಳ್ಳಲು ಸಾಧ್ಯ?**

## ಇದರ ಅರ್ಥವೇನು?

ಇದರ ಅರ್ಥವೇನೆಂದರೆ "**ನಾಲ್ಕು ರಥಗಳು**" – "ನಾಲ್ಕು ಜೀವಶ್ವಾಸ"ವನ್ನು ಸೂಚಿಸುತ್ತದೆ.

ಇಲ್ಲಿ ಕೊಟ್ಟಿರುವ ಆಲೋಚನೆ ಏನೆಂದರೆ – ದೇವರು ಮೊದಲ ಮನುಷ್ಯನಾದ ಆದಾಮನ "**ಮೂಗಿನಲ್ಲಿ**" ತನ್ನ ಒಂದು ಜೀವಶ್ವಾಸವನ್ನು ಊದಿದನು, ಆಗ ಆ ಮನುಷ್ಯನು ಬದುಕುವ ಪ್ರಾಣಿಯಾದನು (**ಆದಿಕಾಂಡ** 2:7), ಅದು "ನಾಲ್ಕು ಜೀವ ಶ್ವಾಸ"ವಾಗಿ ಮಾರ್ಪಟ್ಟಿತು!!

### ಇದು ಹೇಗೆ ಸಾಧ್ಯ?

ಮೊದಲನೆಯದಾಗಿ ಎಲ್ಲಾ ಮನುಕುಲವು ಆ ಮೊದಲ "ಜೀವಶ್ವಾಸ"ದಿಂದ ಜೀವವನ್ನು ಪಡೆದು ಕೊಂಡರೆಂದು ನಮಗೆಗೊತ್ತಿದೆ – ಇದನ್ನು ಕುರಿತು ನಾವು ಕೆಲಗಿನ ವಾಕ್ಯದಲ್ಲಿ ಓದುತ್ತೇವೆ –

**ಅಪೋಸ್ತಲರ ಕೃತ್ಯಗಳು 17:26**

**"ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ....."**

ಆದ್ದರಿಂದ, ದೇವರ ನೋಟದಲ್ಲಿ ಈ "ನಾಲ್ಕು ಜೀವಶ್ವಾಸಗಳು" ಅಥವಾ "ನಾಲ್ಕು ಗಾಳಿಗಳು" ಎಲ್ಲಾ ಮನುಷ್ಯಜಾತಿಯಿಂದ ಉಂಟಾದ ನಾಲ್ಕು ವರ್ಗ ಅಥವಾ ನಾಲ್ಕು ವಿಭಾಗಗಳನ್ನು ಸೂಚಿಸುತ್ತದೆ.

**ಇವು ಈ ನಾಲ್ಕು ರಥಗಳಲ್ಲಿ ಸೂಚಿಸಲಾಗಿದೆ!!**

ಈಗ ಈ ಪ್ರತಿಯೊಂದು ಸೂಚನೆ ಮೇರೆಗೆ ನಾವು ಇಲ್ಲಿ ಸೂಚಿಸಿರುವ ವರ್ಗವನ್ನು ಗುರುತಿಸಬಹುದು.

ಈಗ ನಾವು ಕೆಳಗಿನ ವಾಕ್ಯವನ್ನು ಓದೋಣ –



**ಜೆಕರ್ಯ 6:6**

**"ಅನಂತರ ಕಪ್ಪು ಕುದುರೆಗಳು ಉತ್ತರದೇಶಕ್ಕೆ ಹೊರಟವು."**

ಇಲ್ಲಿ ಕಪ್ಪುಕುದುರೆಗಳ್ಳುಳ್ಳ ರಥಗಳು ಉತ್ತರ ದೇಶದ ಕಡೆಗೆ ಹೋಗುತ್ತಿರುವದನ್ನು ತೋರಿಸಲಾಗಿದೆ!

ಈ ಸಂಕೇತಗಳನ್ನು ಕುರಿತು ಪರಿಶೀಳಿಸುವದಕ್ಕೆ ಮೊದಲು ಈ ವಿವಿಧ ಬಣ್ಣಗಳ್ಳುಳ್ಳ ಕುದುರೆಗಳನೊಳಗೊಂಡ ರಥಗಳು ಏನ್ನನ್ನು ಸೂಚಿಸುತ್ತದೆ ಎಂದು ಅರ್ಥಮಾಡಿಕೊಳ್ಳೋಣ.

ಈ ವಿವಿಧ ಬಣ್ಣಗಳ್ಳುಳ್ಳ ಕುದುರೆಗಳ ವಿಷಯವನ್ನು ಕುರಿತು ಸತ್ಯವೇದದ ಇನ್ನೊಂದು ಸ್ಥಳದಲ್ಲಿಯೂ ಸಹ ನೋಡುತ್ತೇವೆ!!

## ಹೌದು! ಅದು ಪ್ರಕಟನೆ 6ನೇ ಅಧ್ಯಾಯದಲ್ಲಿದೆ.

ಇಲ್ಲಿ ಮೊದಲ ನಾಲ್ಕು ಮುದ್ರೆಗಳನ್ನು ಒಡೆಯುವಾಗ ಒಂದೊಂದರಿಂದಲೂ ಬೇರೆ ಬೇರೆ ಬಣ್ಣಗಳ ಕುದುರೆಗಳು ಹೊರಬರುತ್ತಿದ್ದವು.

ಅಲ್ಲಿ ಪ್ರತಿಯೊಂದು ಕುದರೆಗಳ ಬಣ್ಣಗಳ ಸೂಚನೆಗಳು ತಿಳಿಸಲಾಗುತ್ತಿತ್ತು ಮತ್ತು ಆ ಸೂಚನೆಗಳ ಅರ್ಥಗಳ ಉಪಯೋಗಗಳನ್ನು ಸ್ಪಷ್ಟ ಪಡಿಸಲಾಗುತ್ತಿತ್ತು.

➡ ಅದೇ ರೀತಿ ಇಲ್ಲಿಯೂ ಸಹ ಕುದುರೆಗಳ ವಿವಿದ ಬಣ್ಣಗಳು ಒಂದು **ನಿರ್ದಿಷ್ಟವಾದ ಸಂಕೇತಗಳನ್ನು** ಸೂಚಿಸುತ್ತದೆ ಮತ್ತು ಆ ರಥಗಳು ಅದರ ಸವಾರರನ್ನು ಸೂಚಿಸುತ್ತದೆ!!



## ಈ ರಥಗಳ ಅರ್ಥವೇನು ಅಥವಾ ಇವು ಏನನ್ನು ಸೂಚಿಸುತ್ತದೆ?

➡ ಸಾಮಾನ್ಯವಾಗಿ ರಥಗಳು ಜನಗಳ ಗುಂಪನ್ನು ಕೊಂಡೋಯ್ಯುತ್ತದೆ – ಹಾಗೆಯೇ ಈ ರಥಗಳು **ಜನರ ವರ್ಗ ಅಥವಾ ಗುಂಪನ್ನು ಸೂಚಿಸುತ್ತದೆ!**

➡ **ಈಗ ಕುದುರೆಗಳ ವಿಧವಿಧ ಬಣ್ಣಗಳು ಜನರ ವರ್ಗಗಳನ್ನು (class of people) ಸೂಚಿಸುತ್ತದೆ.**

ಈ ಕುದುರೆಗಳ ಬಣ್ಣಗಳ ಸಂಕೇತಗಳನ್ನು ಅರ್ಥಮಾಡಿಕೊಳ್ಳುವಾಗ ಈ "ರಥಗಳ" ಅರ್ಥಗಳನ್ನು ಮತ್ತು ಜನರ ವಿಧವಿಧವಾದ ವರ್ಗಗಳನ್ನು ನಾವು ಗುರುತಿಸಲು ಸಾಧ್ಯವಾಗುತ್ತದೆ!

ಈಗ ನಾವು ಒಂದೊಂದಾಗಿ ಈ ರಥಗಳನ್ನು ಗುರುತಿಸೋಣ –

## ರಥ # 1



**ಜೆಕರ್ಯ 6:2**

**“ಮೊದಲನೆಯ ರಥಕ್ಕೆ ಕೆಂಪು ಕುದುರೆಗಳು”**

ಹೌದು! ಈ ರಥಗಳಿಗೆ ಒಂದು ಕ್ರಮಗಳಿರುವದನ್ನು ನಾವು ನೋಡುವದರಿಂದ, ನಾವು ಅರ್ಥಮಾಡಿಕೊಳ್ಳ ಬೇಕಾದದ್ದು ಏನೆಂದರೆ

**“ಕೆಂಪು ಕುದುರೆಗಳುಳ್ಳ... ಈ ರಥವು”**

ಮೊದಲನೆಯ ವರ್ಗ ಅಥವಾ ಗುಂಪುಗಳುಳ್ಳ ಜನರನ್ನು ಈ ದರ್ಶನವು ಸೂಚಿಸುತ್ತದೆ.

**ಈ ರಥದ ಅರ್ಥವೇನು ಮತ್ತು ಇದು ಯಾವ ವರ್ಗವನ್ನು ಸೂಚಿಸುತ್ತದೆ?**



ಇದಕ್ಕೆ ಉತ್ತರವನ್ನು ಕುದುರೆಯಲ್ಲಿರುವ ಬಣ್ಣಗಳಲ್ಲಿ ನೋಡುತ್ತೇವೆ!
ಅವು – "**ಕೆಂಪು**" ಬಣ್ಣಗಳಾಗಿವೆ.

**ಈ 'ಕೆಂಪು' ಬಣ್ಣಗಳು ಏನ್ನನ್ನು ಸೂಚಿಸುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಅರಣ್ಯಕಾಂಡ 19:2-3**

**"ಯೆಹೋವನಾದ ನಾನು ಒಂದು ವಿಧಿಯನ್ನು ನೇಮಿಸಿದ್ದೇನೆ; ಅದೇನಂದರೆ - ಎಂದೂ ನೊಗವನ್ನು ಹೊರದ ಮತ್ತು ಯಾವ ಕುಂದುಕೊರತೆಯೂ ಇಲ್ಲದ ಕೆಂದಾಕಳನ್ನು ನಿನಗೆ ತಂದುಕೊಡಬೇಕೆಂದು ಇಸ್ರಾಯೇಲ್ಯರಿಗೆ ಆಜ್ಞಾಪಿಸು. ಅದನ್ನು ನೀವು ಯಾಜಕನಾದ ಎಲ್ಲಾಜಾರನ ಕೈಗೆ ಒಪ್ಪಿಸಬೇಕು. ಅವನು ಅದನ್ನು ಪಾಳೆಯದ ಹೊರಗೆ ಹೊಡಿಸಿಕೊಂಡುಹೋಗಿ ತನಗೆದುರಾಗಿಯೇ ಒಬ್ಬನ ಕೈಯಿಂದ ವಧೆಮಾಡಿಸಬೇಕು."**

ಹೌದು! ಇಲ್ಲಿ ನಮಗೆ ಸತ್ಯವೇದವು ಹೇಳುವದೇನೆಂದರೆ ದೇವದರ್ಶನದ ಗುಡಾರದೊಳಗೆ ಅ ಪಶುವನ್ನು ಬಲಿಕೊಡಲಿಲ್ಲ ಆದರೆ ಗುಡಾರದ ಹೊರಗೆ ಬಲಿಕೊಡಲಾಯಿತು!!

**"ಪಾಳೆಯದ ಹೊರಗೆ"**

ಅದು "ಕೆಂದಾಕಳು" ಆಗಿತ್ತು ಮತ್ತು ಅದರ ಬೂದಿಯನ್ನು ನೀರಿನ ಜೊತೆಗೆ ಸೇರಿಸಿ ಪಾಪಪರಿಹಾರಕ್ಕಾಗಿ ಉಪಯೋಗಿಸಲಾಗುತ್ತಿತ್ತು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಅರಣ್ಯಕಾಂಡ 19:9**

**"ಮತ್ತು ಶುದ್ಧನಾದವನೊಬ್ಬನು ಆ ಆಕಳಿನ ಬೂದಿಯನ್ನು ಕೂಡಿಸಿ ಪಾಳೆಯದ ಹೊರಗೆ ಶುದ್ಧವಾದ ಸ್ಥಳದಲ್ಲಿ ಇಡಬೇಕು. ಅದನ್ನು ಇಸ್ರಾಯೇಲ್ಯರ ಸಮೂಹದವರ ಉಪಯೋಗಕ್ಕಾಗಿ ನೀವು ಜೋಪಾನಮಾಡಬೇಕು. ಅದು ಹೊಲೆಗಳೆವ ನೀರನ್ನು ಸಿದ್ಧಪಡಿಸುವದಕ್ಕಾಗಿ ಅಲ್ಲೇ ಇಟ್ಟಿರಬೇಕು; ಅದು ದೋಷ ಪರಿಹಾರಕವಾದದ್ದು."**

**ಹೌದು! ಇದೂ ಸಹ ಒಂದು ಬಲಿಯಾಗಿತ್ತು!**

ಆದರೆ ಒಂದು ದೊಡ್ಡ ವ್ಯತ್ಯಾಸವೇನೆಂದರೆ ಅದನ್ನು ದೇವದರ್ಶನ ಗುಡಾರದೊಳಗೆ ಮಾಡದೆ ಪಾಳೆಯದ ಹೊರಗೆ ಮಾಡಲಾಗುತ್ತಿತ್ತು!

## ಇದು ಏನ್ನನ್ನು ಸೂಚಿಸುತ್ತದೆ?

ಇದು ನಿಜಸ್ವರೂಪ ದೇವದರ್ಶನಗುಡಾರಕ್ಕೆ ಮೊದಲು ಜೀವಿಸುತ್ತಿದ್ದ ವರ್ಗದವರ ಬಲಿಯನ್ನು ಸೂಚಿಸುತ್ತದೆ –

**ಯೇಸು ಮತ್ತು ಸುವಾರ್ತಾಯುಗದ ಮೊದಲಿದ್ದವರು.**

**ಹೌದು! ಈ ವರ್ಗದವರು ಯೇಸು ಮತ್ತು ಸುವಾರ್ತಾಯುಗಕ್ಕೆ ಮೊದಲು ದೇವರಿಗೆ ವಿಧೇಯರಾಗಿ ತಮ್ಮ ಜೀವನವನ್ನು ಬಲಿಯಾಗಿ ಅರ್ಪಿಸಿ ಜೀವಿಸುತ್ತಿದ್ದವರು.**

ಇವರನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಇಬ್ರಿಯರಿಗೆ 11:35-37**

**"ಸ್ತ್ರೀಯರು ಸತ್ತು ಹೋಗಿದ್ದ ತಮ್ಮವರನ್ನು ಪುನರುತ್ಥಾನದಿಂದ ತಿರಿಗಿ ಹೊಂದಿದರು. ಕೆಲವರು ತಾವು ಯಾತನೆಯ ಯಂತ್ರಕ್ಕೆ ಕಟ್ಟಲ್ಪಟ್ಟಾಗ ಶ್ರೇಷ್ಠಪುನರುತ್ಥಾನವನ್ನು ಹೊಂದುವದಕ್ಕೋಸ್ಕರ ಬಿಡುಗಡೆ ಬೇಡವೆಂದು. ಹೇಳಿ ಮುರಿಸಿಕೊಂಡು ಸತ್ತರು. ಬೇರೆ ಕೆಲವರು ಅಪಹಾಸ್ಯ ಕೊರಡೆಯ ಪೆಟ್ಟು ಬೇಡಿ ಸೆರೆಮನೆ ಇವುಗಳನ್ನು ಅನುಭವಿಸಿದರು. ಕೆಲವರನ್ನು ಜನರು ಕಲ್ಲೆಸೆದುಕೊಂದರು; ಕೆಲವರನ್ನು ಗರಗಸದಿಂದ ಕೊಯ್ದುಕೊಂದರು; ದೇವದ್ರೋಹಿಗಳಾಗಿ ಪ್ರಾಣವನ್ನು ಉಳಿಸಿಕೊಳ್ಳಿರೆಂದು ಕೆಲವರನ್ನು ಪ್ರೇರೇಪಿಸಿದರು; ಕೆಲವರನ್ನು ಕತ್ತಿಯಿಂದ ಕೊಂದರು. ಕೆಲವರು ಕೊರತೆಹಿಂಸೆ ಬಾಧೆ ಇವುಗಳನ್ನು ಅನುಭವಿಸುವವರಾಗಿದ್ದು ಕುರಿ ಮೇಕೆಗಳ ಚರ್ಮಗಳನ್ನು ಉಟ್ಟುಕೊಂಡವರಾಗಿ ತಿರುಗಾಡಿದರು."**

ಹೌದು! ಈ ವರ್ಗದವರು ಯಾರೆಂದರೆ ಹೇಬೆಲನು ಮೊದಲುಗೊಂಡು ಸ್ನಾನಿಕನಾದ ಯೋಹಾನನವರೆಗೆ. ಇವರನ್ನು ನಾವು ಪೂರ್ವಿಕರು ಎಂದು ಕರೆಯುತ್ತೇವೆ (ಇಬ್ರಿಯರಿಗೆ 11:2)






ಇವರು ದೇವರು ಮತ್ತು ಆತನ ವಾಗ್ದಾನಗಳ ಮೇಲೆ ನಂಬಿಕ್ಕೆ ಇಟ್ಟಿದ್ದರಿಂದ ಹೆಸರುವಾಸಿಯಾದವರು!!

ಇವರು ಮನುಷ್ಯಜಾತಿಯಲ್ಲಿ ಆಯ್ಕೆಯಾದ ಮೊದಲ ವರ್ಗದವರು,

ಇವರು ಯೇಸುವಿನ ಮೊದಲ ಬರುವಿಕೆಯ ಕಾಲಕ್ಕೆ ಮೊದಲು ಬೆಳವಣಿಗೆ ಹೊಂದಿ ಆಯ್ಕೆಯಾದವರು.

ಆದರೆ ಇಲ್ಲಿ ನಾವು ನೋಡುವದೇನೆಂದರೆ ಈ ರಥವು ಯಾವ ದಿಕ್ಕಿನಲ್ಲಿ ಹೊರಟಿತು ಎಂದು ತಿಳಿಸಿಲ್ಲ.

**ಇದಕ್ಕೆ ಅರ್ಥವೇನು?**

ಇದಕ್ಕೆ ಉತ್ತರವನ್ನು ನಾವು ಆಮೇಲೆ ನೋಡೋಣ, ಏಕೆಂದರೆ ಬೇರೆ ರಥಗಳ ವಿಷಯಗಳಲ್ಲಿ ಅವುಗಳು ಹೋಗುವ

.........ದಿಕ್ಕು ಯಾವ ಬಹುಮಾನವನ್ನು ಹೊಂದುತ್ತದೆ ಎಂದು ಸೂಚಿಸುತ್ತದೆ.

ಈ ವರ್ಗ ಮತ್ತು ಇದರ ಕೊನೆಯ ಬಹುಮಾನವನ್ನು ಕುರಿತು ಈ ಅಭ್ಯಾಸದ ಕೊನೆಯಲ್ಲಿ ನೋಡಲಿದ್ದೇವೆ!!

ಈಗ ನಾವು ಎರಡನೆಯ ರಥವನ್ನು ಕುರಿತು ನೋಡೋಣ....

## ರಥ # 2



**ಜೆಕರ್ಯ 6:2**

**“.....ಎರಡನೆಯ ರಥಕ್ಕೆ ಕಪ್ಪು ಕುದುರೆಗಳು.....”**

ಈ ರಥದ "ಕಪ್ಪು ಕುದುರೆಗಳು" ಆಯ್ಕೆಯ ಕ್ರಮದಲ್ಲಿ ಮನುಷ್ಯಜಾತಿಯಿಂದ ಎರಡನೆಯ ವರ್ಗವನ್ನು ಸೂಚಿಸುತ್ತದೆ.

**ಈ ರಥದ ವರ್ಗದವರು ಯಾರನ್ನು ಸೂಚಿಸುತ್ತದೆ?**



ಇದಕ್ಕೆ ಉತ್ತರವನ್ನು "ಕುದುರೆಗಳ" ಬಣ್ಣದಿಂದ ಕಂಡುಹಿಡಿಯಬಹುದು!

**ಅವುಯಾವುದೆಂದರೆ.... "ಕಪ್ಪು" ಬಣ್ಣ!!**

**ಈ ‘ಕಪ್ಪು’ ಬಣ್ಣಗಳು ಏನ್ನನ್ನು ಸೂಚಿಸುತ್ತದೆ?**

ಎಲ್ಲರಿಗೂ ತಿಳಿದಿರುವಂತೆ ಕಪ್ಪು ಬಣ್ಣವು ಮರಣಕ್ಕೆ ಸಂಬಂಧಪಟ್ಟಿವೆ!!

**ಹೌದು! ಈ ವರ್ಗದವರು ಏನೋ ಒಂದು ಮರಣಕ್ಕೆ ಸಂಬಂಧಪಟ್ಟವರಾಗಿದ್ದಾರೆ.**

**ಅವರು ಯಾರು?**

ಬನ್ನಿ ಕೆಳಗಿನ ವಾಕ್ಯವನ್ನು ಓದೋಣ –



**ರೋಮಾಪುರದವರಿಗೆ 6:3**

**"ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾ ಸ್ನಾನಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?"**

ಹೌದು! ಈ ವರ್ಗದವರು –

➡ **"ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ" ಮಾಡಿಸಿಕೊಂಡವರು.**

**ಈ ವರ್ಗದವರು ಕ್ರಿಸ್ತನ ಶರೀರವಾಗಿ ಮಾರ್ಪಟ್ಟವರಾಗಿದ್ದಾರೆ- ಆತನ ಸಭೆಯವರು!!**

☞ ಮತ್ತೆ ಈ ವರ್ಗದ "ಮರಣ" ಸ್ಥಿತಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೊಲೊಸ್ಸೆಯದವರಿಗೆ 3:3**

**"ಯಾಕೆಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ."**

ಹೌದು! ಈ ವರ್ಗದ "ಮರಣ"ವು ಒಂದು ಒಡಂಬಡಿಕೆಯನ್ನು ಕುರಿತು ಮಾತನಾಡುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 50:5** – **"ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡುಬನ್ನಿರಿ ಎಂದು ಆಜ್ಞಾಪಿಸುತ್ತಾನೆ."**

ಹೌದು! ಇದೊಂದು ಯಜ್ಞದ ಮೂಲಕ ಮಾಡಿಕೊಂಡ ಒಡಂಬಡಿಕೆಯಾಗಿದೆ!!

**ಈ ಯಜ್ಞದಲ್ಲಿ (ಬಲಿಯಲ್ಲಿ) ಏನೇನಿದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ರೋಮಾಪುರದವರಿಗೆ 12:1**

**"ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ......"**

**ಹೌದು! ಆ ಯಜ್ಞವು (ಬಲಿಯು) ಯಾವುದೆಂದರೆ - "ನಿಮ್ಮ ದೇಹಗಳು"**



ಇದು ಮನುಷ್ಯನ ಜೀವಿತ (ಜೀವನ) ಮತ್ತು ಅದರ ಎಲ್ಲಾ ಹಕ್ಕುಗಳು, ಸವಲತ್ತುಗಳು ಮತ್ತು ಆಸಕ್ತಿಗಳನ್ನು ಕರ್ತನ ಸೇವೆ ಮತ್ತು ಆತನ ಸತ್ಯಕ್ಕಾಗಿ ಮರಣಕ್ಕೆ ಬಲಿಯಾಗಿ ಅರ್ಪಿಸುವದನ್ನು ಸೂಚಿಸುತ್ತದೆ.



ಈ ವರ್ಗದವರು ಪ್ರತಿದಿನವೂ ನಂಬಿಗಸ್ತಿಕೆಯಿಂದ ತಮ್ಮ ಮಾನವ ಜೀವನವನ್ನು ದೇವರ ಚಿತ್ತ ಮತ್ತು ಆತನ ಸೇವೆ ಮಾಡುವದಕ್ಕಾಗಿ ಯಜ್ಞವನ್ನಾಗಿ ಅರ್ಪಿಸುತ್ತಾರೆ ಮತ್ತು ಮರಣಕ್ಕೆ ತಮ್ಮನ್ನು ಒಪ್ಪಿಸುತ್ತಾರೆ.



ಈ ವರ್ಗದವರನ್ನು ಕುರಿತು ಮತ್ತೆ ಕೆಳಗಿನ ವಾಕ್ಯದಲ್ಲಿ ಹೀಗೆ ಸೂಚಿಸಲಾಗಿದೆ –

**ಪರಮಗೀತೆ 1:5,6**

**"ಯೇರೂಸಲೇಮಿನ ನಾರಿಯರೇ, ನಾನು ಕೇದಾರಿನ ಗುಡಾರಗಳಂತೆ ಕಪ್ಪಾಗಿದ್ದರೂ ಸೊಲೊಮೋನನ ಪರದೆಗಳಂತೆ ಚಂದವುಳ್ಳವಳು. ಸೂರ್ಯನ ದೃಷ್ಟಿಗೆ ಬಿದ್ದು ಕಪ್ಪಾಗಿರುವದರಿಂದ ನನ್ನನ್ನು ದಿಟ್ಟಿಸಿ ನೋಡಬೇಡಿರಿ. ನನ್ನ ಸಹೋದರರು ನನ್ನ ಮೇಲೆ ಉರಿಗೊಂಡು....."**

ಇಲ್ಲಿಯೂ ಸಹ – "**ಕಪ್ಪು**" ಎಂದು ಸೂಚಿಸಲಾಗಿದೆ

ಇಲ್ಲಿ "**ಸೂರ್ಯನ**" ದೃಷ್ಟಿಗೆ ಬಿದ್ದು ಕಪ್ಪಾಗಿದೆ ಎಂದು ಹೇಳಲಾಗಿದೆ!!

**ಇಲ್ಲಿ 'ಸೂರ್ಯನ' ಕಿರಣ ಯಾವುದನ್ನು ಸೂಚಿಸುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**ಮತ್ತಾಯ 13:5,6**

**"ಕೆಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ ನೆಲದಲ್ಲಿ ಬಿದ್ದವು; ಅಲ್ಲಿ ಮಣ್ಣು ತೆಳ್ಳಗಿದ್ದದರಿಂದ ಅವು ಬೇಗ ಮೊಳೆತವು; ಆದರೆ ಬಿಸಿಲೇರಿದಾಗ ಬಾಡಿ ಬೇರಿಲ್ಲದ ಕಾರಣ ಒಣಗಿಹೋದವು."**

**ಇದು "ಬಿತ್ತುವವನ ಸಾಮ್ಯವಾಗಿದೆ"**

ಮತ್ತು ಇಲ್ಲಿ ಸೂರ್ಯನನ್ನು ಸೂಚಿಸಿರುವದನ್ನು ನೋಡುತ್ತೇವೆ!

ಇದರ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನಾವು ನೋಡುತ್ತೇವೆ –

**ಮತ್ತಾಯ 13:20,21**

**"ಒಬ್ಬನು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾನೆ; ತನಗೆ ಬೇರಿಲ್ಲದ ಕಾರಣ ಇವನು ಸ್ವಲ್ಪಕಾಲ ಮಾತ್ರವೇ ಇದ್ದು ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿಬೀಳುತ್ತಾನೆ;**

**ಇವನೇ ಬೀಜ ಬಿದ್ದ ಬಂಡೆಯ ನೆಲವಾಗಿರುವವನು.”**

ಹೌದು! "**ಸೂರ್ಯ**" ನೆಂದರೆ ಸಂಕಟ ಮತ್ತು ಹಿಂಸೆಯನ್ನು ಸೂಚಿಸುತ್ತದೆ.

ಮತ್ತು ಈ ವರ್ಗದವರು ತಮ್ಮನ್ನು ತಾವೇ ಕಪ್ಪಾಗಿರುವದಾಗಿ ಸೂಚಿಸಲಾಗಿದೆ, ಕಾರಣವೇನೆಂದರೆ ಈ ವರ್ಗದ ಬೆಳವಣಿಗೆಯ ವಿಧಾನದಲ್ಲಿ ಅನೇಕ ರೀತಿಯಾದ ಸಂಕಟ ಮತ್ತು ಹಿಂಸೆಗೆ ಒಳಗಾಗಿರುವರು ಎಂದು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಓದುತ್ತೇವೆ –



**ಅಪೋಸ್ತಲರ ಕೃತ್ಯಗಳು 14:22**

**“ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ.....”**

**ಹೌದು! ಈ ವರ್ಗದವರು ಅಧಿಕ ಹಿಂಸೆಗಳನ್ನು ಎದುರುಗೊಳ್ಳಬೇಕು.**

ಮತ್ತು ಇದಕ್ಕೆ ಕಾರಣವನ್ನು ಇನ್ನೂ ವಿವರವಾಗಿ ಅಪೋಸ್ತಲನನಾದ ಪೌಲನು ಹೇಳಿರುವದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**2 ತಿಮೊಥೆಯನಿಗೆ 3:12**

**“ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸುಮಾಡುವವರೆಲ್ಲರೂ ಹಿಂಸೆಗೊಳಗಾಗುವರು.”**

ಹೌದು! ಈ ಕೆಡುಕಾದ ಲೋಕದಲ್ಲಿ ಬೆಳಕು ಮತ್ತು ಕತ್ತಲೆಯ ಮಧ್ಯ ಹೋರಾಟವಿರುವುದರಿಂದ ಹಿಂಸೆ ಮತ್ತು ಸಂಕಟಗಳಿಗೆ ಕಾರಣವಾಗುತ್ತದೆ.

**ಆದರೆ "ಹೊಸ ಸೃಷ್ಟಿ"ಯು ಈ ದಾರಿಯ ಮೂಲಕವಾಗಿಯೇ ಬೆಳವಣಿಗೆ ಹೊಂದುತ್ತಾರೆ ಮತ್ತು ದೈವೀಕ ಸ್ವಭಾವವನ್ನು ಪಡೆಯುವದಕ್ಕೆ ಯೋಗ್ಯರಾಗುವಂತೆ ಗುಣಲಕ್ಷಣಗಳಲ್ಲಿ ಬೆಳವಣಿಗೆ ಹೊಂದುತ್ತಾರೆ!!**

**ಮತ್ತು ಈಗ ಈ ರಥ ಹೊರಟ ದಿಕ್ಕನ್ನು ಕುರಿತು ಏನು ಓದುತ್ತೇವೆ?**

ನಾವು ಕೆಳಗಿನ ವಾಕ್ಯವನ್ನು ಓದೋಣ –

**ಜೆಕರ್ಯ 6:6**

**"ಆನಂತರ ಕಪ್ಪು ಕುದುರೆಗಳು ಉತ್ತರದೇಶಕ್ಕೆ ಹೊರಟವು."**

ಹೌದು! ಇದರ ದಿಕ್ಕನ್ನು – "ಉತ್ತರ ದೇಶದ" ಕಡೆಗೆ ತೋರಿಸಲಾಗಿದೆ.

**ಈ "ಉತ್ತರ" ದಿಕ್ಕಿನ ಅರ್ಥವೇನು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಕೀರ್ತನೆಗಳು 75:6-7**

**"ಯಾಕಂದರೆ ಉದ್ಧಾರವು ಮೂಡಲಿಂದಾಗಲಿ ಪಡುವಲಿಂದಾಗಲಿ ಅರಣ್ಯದಿಂದಾಗಲಿ ಬರುವದಿಲ್ಲ. ದೇವರೇ ನ್ಯಾಯಾಧೀಶನಾಗಿ ಒಬ್ಬನನ್ನು ತೆಗೆದು ಇನ್ನೊಬ್ಬನನ್ನು ಸ್ಥಾಪಿಸುತ್ತಾನೆ."**

ಆಹ್, ಹೌದು! ಉತ್ತರ ದಿಕ್ಕು ಸ್ಪಷ್ಟವಾಗಿ ಸೂಚಿಸುವದೇನೆಂದರೆ –

"**ದೇವರ ವಾಸಸ್ಥಳ**" – ಪರಲೋಕ!!

ಆದ್ದರಿಂದ "**ಕಪ್ಪುಕುದುರೆ**"ಗಳ್ಳುಳ್ಳ ಈ ರಥಗಳು ಪರಲೋಕ ರಕ್ಷಣೆಯ ವರ್ಗದವರನ್ನು ಸೂಚಿಸುತ್ತದೆ.

**ಹೌದು! ಈ ಚಿಕ್ಕ ಹಿಂಡಾದ 1,44,000 ಜನರು ದೈವೀಕ ಸ್ವಭಾವವನ್ನು ಹೊಂದುವವರಾಗಿದ್ದಾರೆ.**

ಈಗ ನಾವು ಮೂರನೆಯ ರಥವನ್ನು ಕುರಿತು ನೋಡೋಣ –

**ರಥ # 3**



**ಜೆಕರ್ಯ 6:2**

**"......ಮೂರನೆಯ ರಥಕ್ಕೆ ಬಿಳಿ ಕುದುರೆಗಳು...."**

ಈ ರಥವು "**ಬಿಳಿ ಕುದುರೆಗಳು**" ಉಳ್ಳದ್ದಾಗಿದ್ದು ಮನುಷ್ಯಜಾತಿಯಿಂದ

ಮೂರನೆಯ ವರ್ಗದವರನ್ನು ಸೂಚಿಸುತ್ತದೆ ಎಂದು ಈ ದರ್ಶನದಲ್ಲಿ ನೋಡುತ್ತೇವೆ.

**ಈ ವರ್ಗದವರು ಯಾರು?**

ಮತ್ತೆ ಇದಕ್ಕೆ ಉತ್ತರವನ್ನು ಕುದುರೆಗಳ ಬಣ್ಣಗಳಲ್ಲಿ ನೋಡುತ್ತೇವೆ!!

**ಅವು ಯಾವದೆಂದರೆ.... "ಬಿಳಿ" ಬಣ್ಣಗಳು!!**

**ಈ 'ಬಿಳಿ' ಬಣ್ಣ ಏನನ್ನು ಸೂಚಿಸುತ್ತದೆ?**



ಇದಕ್ಕೆ ಉತ್ತರವನ್ನು ಕೆಳಗಿನವಾಕ್ಯದಲ್ಲಿ ಓದುತ್ತೇವೆ –

**ಯೆಶಾಯ 1:18**

**"ನಿಮ್ಮ ಪಾಪಗಳು ಕಡು ಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು."**

ಹೌದು! ಇಲ್ಲಿ ನಾವು ನೋಡುವದೇನೆಂದರೆ ಬಿಳಿ ಬಣ್ಣವು ಪಾಪದಿಂದ ಶುದ್ಧವಾದ ಸ್ಥಿತಿಯನ್ನು ಸೂಚಿಸುತ್ತದೆ!!

ಆದ್ದರಿಂದ ಈ ವರ್ಗದವರು ತಮ್ಮ ಪಾಪಗಳನ್ನು ಶುದ್ಧಮಾಡಿಕೊಂಡವರನ್ನು ಸೂಚಿಸುತ್ತದೆ!!

**ಅವರು ಯಾರು?**

ಇವರನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಸೂಚಿಸಿರುವದನ್ನು ನೋಡುತ್ತೇವೆ –

**ಪ್ರಕಟನೆ 7:14**

**"....ಇವರು ಆ ಮಹಾ ಹಿಂಸೆಯನ್ನು ಅನುಭವಿಸಿ ಬಂದವರು; ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿದ್ದಾರೆ."**

ಹೌದು! ಇದು ಯಾರನ್ನು ಸೂಚಿಸುತ್ತದೆ ಎಂದರೆ, ಈ ವರ್ಗದವರು "**ಯಜ್ಞದ ಕುರಿಯಾದಾತನ ರಕ್ತದಲ್ಲಿ**" ತಮ್ಮ ಪಾಪಗಳನ್ನು ತೊಳೆದು ತಮ್ಮ ವಸ್ತ್ರಗಳನ್ನು – "**ಬಿಳುಪಾಗಿ**" ಮಾಡಿಕೊಂಡವರು.



ಹೌದು! ಈ ವರ್ಗದವರನ್ನು "**ಬಿಳಿ ಕುದುರೆ**"ಗಳ್ಳುಳ್ಳ ರಥಗಳನ್ನು ಸೂಚಿಸಲಾಗಿದೆ.

 ಅವರನ್ನು "**ಜನಸಮೂಹ**" ಎಂದು ಕರೆಯಲಾಗುತ್ತದೆ.

ಇದೇ ಮನುಷ್ಯಜಾತಿಯಿಂದ ಆಯ್ಕೆಯಾಗುವ ಮೂರನೆಯ ವರ್ಗ ಮತ್ತು ಇವರು ಕ್ರಿಸ್ತನ "ಹಿಂಬಾಲಕ"ರಾಗಿ ಕರ್ತನೊಂದಿಗೆ – "**ಯಜ್ಞದ ಮೂಲಕ ಒಡಂಬಡಿಕೆ**" ಯನ್ನು ಮಾಡಿರುತ್ತಾರೆ (**ಕೀರ್ತನೆ** 50:5)

## ಅವರು "ಕರೆಯಲ್ಪಟ್ಟವರು ಮತ್ತು ಆರಿಸಲ್ಪಟ್ಟವರು ಆದರೆ ನಂಬಿಗಸ್ತರಲ್ಲದವರಾಗಿ ಕಾಣಲ್ಪಟ್ಟಿದ್ದಾರೆ"

ಈ ವರ್ಗದವರನ್ನು ಮತ್ತಾಯ 25:2–3ರಲ್ಲಿ ಕರ್ತನಾದ ಯೇಸು –

➡ "**ಬುದ್ಧಿಯಿಲ್ಲದ ಕನ್ಯೆ**" ಎಂದು ಸೂಚಿಸಿದ್ದಾರೆ.

ಅವರು ಯಾವ ಸ್ಥಿತಿಯಲ್ಲಿದ್ದಾರೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 25:3**

**"ಬುದ್ಧಿಯಿಲ್ಲದವರು ತಮ್ಮ ಆರತಿಗಳನ್ನು ತಕ್ಕೊಂಡರು, ಆದರೆ ಎಣ್ಣೆ ತಕ್ಕೊಳ್ಳಲಿಲ್ಲ."**



ಹೌದು! ಇವರನ್ನು "**ಕನ್ಯೆಯರು**" ಎಂದು ಏಕೆ ಹೇಳಲಾಗುತ್ತದೆ ಎಂದರೆ ಇವರು ಸತ್ಯವನ್ನು ನಂಬುತ್ತಾರೆ ಮತ್ತು ಅಂಗೀಕರಿಸುತ್ತಾರೆ ಆದರೆ ಇವರನ್ನು "**ಬುದ್ಧಿಯಿಲ್ಲದವರು**" ಎಂದು ಹೇಳಲು ಕಾರಣವೇನೆಂದರೆ ಇವರು

➡ **"ಎಣ್ಣೆ ತಕ್ಕೊಳ್ಳಲಿಲ್ಲ"**

ಇದು ಅವರ ಜೀವಿತದಲ್ಲಿ ಸತ್ಯದ ಆತ್ಮವನ್ನು ಹೊತ್ತುಕೊಳ್ಳದೆ, ಈ "ಲೋಕದ ಆತ್ಮ"ದ ಅತಿಭಾರವನ್ನು ಹೊತ್ತುಕೊಳ್ಳುತ್ತಾರೆಂದು ಕೆಳಗಿನ ವಾಕ್ಯದಲ್ಲಿ ವಿವರಿಸಿರುವದನ್ನು ನೋಡುತ್ತೇವೆ –

**ಮತ್ತಾಯ 13:22**

**“ಒಬ್ಬನು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ, ಫಲವನ್ನು ಕೊಡದೆ ಇರುತ್ತಾನೆ; ಇವನೇ ಮುಳ್ಳುಗಿಡಗಳಲ್ಲಿ ಬೀಜ ಬಿದ್ದ ನೆಲವಾಗಿರುವವನು.”**




ಹೌದು! **"ಮುಳ್ಳುಗಿಡಗಳು"** ಎಂದರೆ ಈ **"ಲೋಕದ ಆತ್ಮ"**ಗಳಾಗಿವೆ ಎಂದು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ –

**"ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ”**

ಈ ವರ್ಗದವರು ದೇವರ ವಾಕ್ಯದ ಮೇಲೆ ಮತ್ತು ಆತನ ವಾಗ್ದಾನಗಳ ಮೇಲೆ ನಂಬಿಕೆಯಿಲ್ಲದವರಾಗಿ ಕಾಣಲ್ಪಡುತ್ತಾರೆ ಮತ್ತು ತಮ್ಮನ್ನು ತಾವೇ ಈ "ಲೋಕದ ಆತ್ಮಗಳಲ್ಲಿ" ಮತ್ತು ಪಾಪಗಳಲ್ಲಿ ಅಶುದ್ಧಮಾಡಿಕೊಳ್ಳುತ್ತಾರೆ ಮತ್ತು "ಶುದ್ಧಪಡಿಸಿಕೊಳ್ಳು"ವಂತಹ ಇನ್ನೊಂದು ವಾಗ್ದಾನವಿರುವದನ್ನು

ಉಪಯೋಗಿಸಿಕೊಳ್ಳುವದಿಲ್ಲ ಎಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**1 ಯೋಹಾನ 1:9**

**“ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು.”**

ಕೆಳಗಿನ ವಾಗ್ದಾನದ ವಾಕ್ಯವನ್ನು ಗಮನಿಸಿರಿ –

**“ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ.”**

ಹೌದು! ಈ ವರ್ಗದವರು "ಈ ವಾಗ್ದಾನ"ಗಳನ್ನು ಮತ್ತು ಶುದ್ಧಮಾಡುವ ವಿಧಾನವನ್ನು ಉಪಯೋಗಿಸಲು ತಪ್ಪುತ್ತಾರೆ

ಮತ್ತು ಅವರ "ವಸ್ತ್ರ"ಗಳನ್ನು ಕೊನೆಯದಾಗಿ ಯಜ್ಞದ ಕುರಿಯಾದಾತನ ರಕ್ತದಿಂದ ತೊಳೆಯಬೇಕಾಗುತ್ತದೆ!!

ಈಗ ನಾವು ಈ ರಥವು ಹೋಗುವ ದಿಕ್ಕನ್ನು ಕುರಿತು ಗಮನಿಸೋಣ, ಕೆಳಗಿನ ವಾಕ್ಯವನ್ನು ಓದೋಣ –

**ಜೆಕರ್ಯ 6:6**

**“....ಬಿಳಿ ಕುದುರೆಗಳು ಅವುಗಳನ್ನು ಹಿಂಬಾಲಿಸಿದವು....”**




ಹೌದು! ಈ ರಥಗಳು ಆ "**ಕಪ್ಪು ರಥಗಳು**" ಯಾವ ದಿಕ್ಕಿನಲ್ಲಿ ಹೋಯಿತೋ ಅದೇ ದಿಕ್ಕನ್ನು ಹಿಂಭಾಲಿಸಿದವು.

ಹೌದು! "**ಉತ್ತರ ದೇಶದ**" ಕಡೆಗೆ ಹೊರಟವು.

**ಹೌದು! ಈ ವರ್ಗದವರೂ ಸಹ ಪರಲೋಕದ ರಕ್ಷಣೆಯನ್ನು ಹೊಂದುತ್ತಾರೆ.**

ಇದನ್ನು ಇನ್ನೂ ಸ್ಪಷ್ಟಪಡಿಸಿರುವದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಕೀರ್ತನೆಗಳು 45:14**

**"…..ಆಕೆಯು….ಸಖಿಯರಾದ ಕನ್ಯೆಯರ ಪರಿವಾರದೊಡನೆ ಅರಸನ ಬಳಿಗೆ ಬರುವಳು."**

ಹೌದು! "ಮದಲಗಿತ್ತಿ" ವರ್ಗದ ರಕ್ಷಣೆಯ ನಂತರ ಈ ವರ್ಗದ ರಕ್ಷಣೆಯು ಇರುವದು!!

ಅವರ ಸ್ಥಾನವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ –

**ಪ್ರಕಟನೆ 7:9**

**"ಇವುಗಳಾದ ಮೇಲೆ, ಇಗೋ ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವದನ್ನು ಕಂಡೆನು. ಅವರು ಸಕಲ ಜನಾಂಗಕುಲ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು."**

ಈ ವರ್ಗದವರು ದೇವರನ್ನು ಮತ್ತು ಯೇಸುವನ್ನು ಮತ್ತು ಸಭೆ ವರ್ಗದವರನ್ನು ಸೇವೆ ಮಾಡುವರು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**"….ಸಿಂಹಾಸನದ ಮುಂದೆಯೂ ಯಜ್ಞದಕುರಿಯಾದಾತನ ಮುಂದೆಯೂ….."**

ಮತ್ತು ಅವರು ಲಯತ್ವವುಳ್ಳ ದೂತರ ಸ್ವಭಾವದ ಜೀವವನ್ನು ಪಡೆದುಕೊಳ್ಳುವರು!!

ಈಗ ನಾವು ಕೊನೆಯ ರಥ ಮತ್ತು ಅದರಲ್ಲಿರುವ ಏನೋ ವಿಶೇಷವಾದ ವಿಷಯವನ್ನು ಕುರಿತು ನೋಡೋಣ –

## ರಥ # 4



**ಜೆಕರ್ಯ 6:2**

**"…..ನಾಲ್ಕನೆಯ ರಥಕ್ಕೆ ಮಚ್ಚೆ ಮಚ್ಚೆಯ ಬಲವಾದ ಕುದುರೆಗಳು ಕಟ್ಟಿದ್ದವು."**

ಇದು ನಾಲ್ಕನೆಯ ವರ್ಗದ ಮನುಷ್ಯಜಾತಿಯವರನ್ನು ಸೂಚಿಸುತ್ತದೆ.

**ಅವರು ಯಾರು?**

ಇದಕ್ಕೆ ಉತ್ತರವನ್ನು ಆ ಕುದುರೆಗಳ ಬಣ್ಣಗಳಲ್ಲಿ ನೋಡಬಹುದು!!

ಇಲ್ಲಿ ನಾವು ಇನ್ನೊಂದು ವಿಷಯವನ್ನು ಮೊದಲು ಗಮನಿಸಬೇಕು!



ಈ ಕುದುರೆಗಳಲ್ಲಿ ಎರಡು ವಿಧಗಳಿವೆ ಎಂದು ನಾವು ಓದುತ್ತೇವೆ –

**"ಮಚ್ಚೆ ಮಚ್ಚೆಯ ಬಲವಾದ ಕುದುರೆಗಳು"**

ಇಲ್ಲಿ ಮಚ್ಚೆ ಮಚ್ಚೆ ಮತ್ತು ಬಲವಾದ ಎಂಬ ಎರಡು ವಿಧ ವಿಧವಾದ ಕುದುರೆಗಳಿವೆ, ಇದು ಎರಡು ವರ್ಗದ ಜನರನ್ನು ಸೂಚಿಸುತ್ತದೆ!

**ಈ ವರ್ಗದವರು ಯಾರು?**

ಈಗ ನಾವು ಈ ಎರಡು ವಿಧವಾದ ಕುದುರೆಗಳನ್ನು ಕುರಿತು ಅಭ್ಯಾಸ ಮಾಡೋಣ –

**"ಗ್ರಿಸಲ್ಡ್" (grisled)**

ಇದು ಇಬ್ರಿಯ ಪದವಾದ – "**ಬ್ಯಾರೋಡ್**"

**(barod)**ದಿಂದ ಭಾಷಾಂತರಿಸಲ್ಪಟ್ಟಿದೆ **( Strong's Hebrew # 1261)**

ಮತ್ತು ಇದರ ಅರ್ಥ – "ಚುಕ್ಕೆ" **(spotted)** ಎಂದು ಆಗುತ್ತದೆ.

ಹೌದು! ಈ ವರ್ಗದವರು ಸಾಮಾನ್ಯ ಮನುಷ್ಯದವರು. ಇವರು ಮರಣದಿಂದ ಎಚ್ಚೆತ್ತ ನಂತರ –

ಪಾಪ ಮತ್ತು ಮರಣ ಮತ್ತು ಅಪರಿಪೂರ್ಣ ಸ್ಥಿತಿಯಲ್ಲಿರುವರು.

**ಹೌದು! ಅವರು ಇನ್ನೂ ಪಾಪದ "ಚುಕ್ಕೆ"ಯಲ್ಲಿರುವರು!**

ಆದರೆ ಈ ಸಾಮಾನ್ಯ ಮನುಷ್ಯದವರ ನಡುವೆ ಇನ್ನೊಂದು ವರ್ಗದವರೂ ಸಹ ಇರುವರೆಂದು ವಿವರಿಸಿರುವದನ್ನು ನೋಡುತ್ತೇವೆ –

**"ಬೇ" (bay)**

ಇದು ಇಬ್ರಿಯ ಪದವಾದ – "ಅಮೋಟ್ಸ್" **(amots)**ದಿಂದ ಭಾಷಾಂತರಿಸಲ್ಪಟ್ಟಿದೆ.



ಇದರ ಅರ್ಥ ಏನೆಂದರೆ "**ಗಾಢವಾದ ಬಣ್ಣ**" **(strong color)** ಮತ್ತು ಇನ್ನೂ ಅರ್ಥವೇನೆಂದರೆ – **"ಮೊಂಡುತನ ಮತ್ತು ಜಗ್ಗದ (ಹಠಮಾರಿ)"**

ಈ ವರ್ಗದ ಜನರನ್ನು "ಬಲವಾದ ಕುದುರೆ"ಗೆ ಸೂಚಿಸಲಾಗಿದ್ದು, ಸತ್ತವರಿಂದ ಸಾಮಾನ್ಯ ಪುನಃರುತ್ಥಾನ ಹೊಂದುತ್ತಾರೆ. ಆದರೆ ಇವರು ನೀತಿಯ ಮಾರ್ಗಗಳನ್ನು ಎದುರಿಸುವವರಾಗಿರುತ್ತಾರೆ.

ಈ ವರ್ಗದವರನ್ನು ಕುರಿತು ಪ್ರತ್ಯೇಕವಾಗಿ ಕೆಳಗಿನ ವಾಕ್ಯದಲ್ಲಿ ತಿಳಿಸಲಾಗಿದೆ –

**ಯೆಶಾಯ 26:10**

**“ದುಷ್ಟರನ್ನು ಕರುಣಿಸಿದರೂ ಅವರು ಧರ್ಮಜ್ಞಾನವನ್ನು (ನೀತಿಯನ್ನು) ಪಡೆಯರು; ಯೆಹೋವನ ಮಹಿಮೆಯನ್ನು ಲಕ್ಷಿಸದೆ ಯಥಾರ್ಥವಂತರ ದೇಶದಲ್ಲಿಯೂ ಅನ್ಯಾಯವನ್ನಾಚರಿಸುವರು.”**



ಹೌದು! ಈ ವರ್ಗದವರು ದೇವರ ರಾಜ್ಯದ ಸಮಯದಲ್ಲಿ ಮತ್ತು ನ್ಯಾಯತೀರ್ಪಿನ ದಿನದಲ್ಲಿಯೂ

**ಮತ್ತಾಯ** 25:41ರಲ್ಲಿ – "**ಆಡುಗಳು**" ಎಂದು ಸೂಚಿಸಿರುವ –

“ಕುರಿಗಳು ಮತ್ತು ಆಡುಗಳ ಸಾಮ್ಯ"ದಲ್ಲಿ ಸೂಚಿಸಿರುವಂತೆ ತಮ್ಮ ಗುಣಲಕ್ಷಣವನ್ನು ವ್ಯಕ್ತಪಡಿಸುವರು.

ಈಗ ನಾವು ಈ "**ಮಚ್ಚೆ ಕುದುರೆ**" **("bay horses")**ಗಳ ಇನ್ನೂ ಒಂದು ವಿಷಯವನ್ನು ಕುರಿತು ಓದೋಣ –

**ಜೆಕರ್ಯ 6:7**

**“ಕೆಂಪು ಕುದುರೆಗಳು ಬಂದು ಲೋಕದಲ್ಲಿ ಸಂಚರಿಸುವದಕ್ಕೆ ಹೊರಡಬೇಕೆಂದು ತ್ವರೆಪಟ್ಟವು; ಅವನು - ಹೊರಡಿರಿ, ಲೋಕದಲ್ಲಿ ಸಂಚರಿಸಿರಿ ಎಂದಪ್ಪಣೆ ಮಾಡಲು ಅವು ಲೋಕದಲ್ಲಿ ಸಂಚರಿಸಿದವು.”**

## ಇದರ ಅರ್ಥವೇನು?

ಈ ವಿಶಿಷ್ಟವಾದ ಸೂಚನೆಯಾದ – "**ಲೋಕದಲ್ಲಿ ಸಂಚರಿಸಿದವು**" ಎಂಬುದು ಇನ್ನೊಂದು ವಾಕ್ಯದಲ್ಲೂ ನೋಡುತ್ತೇವೆ –

**ಯೋಬನು 1:7**

**"ಆಗ ಸೈತಾನನು ಯೆಹೋವನಿಗೆ ಭೂಲೋಕದಲ್ಲಿ ಸಂಚರಿಸುತ್ತಾ ಅಲ್ಲಲ್ಲಿ ತಿರುಗುತ್ತಾ ಇದ್ದು ಬಂದೆನು ಎಂದು ಹೇಳಿದನು."**



ಆಹ್! ಇದು ಸ್ವತಃ ಸೈತಾನನ ಸ್ವಭಾವವಾಗಿದೆ!!

ಇದನ್ನು ನಾವು ಮತ್ತೆ ಕೆಳಗಿನ ವಾಕ್ಯದಲ್ಲಿ ಕೊಟ್ಟಿರುವದನ್ನು ನೋಡುತ್ತೇವೆ –

**1 ಪೇತ್ರನು 5:8**

**"....ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ."**

ಹೌದು! ಇದು ಸೈತಾನನ ಸ್ವಭಾವ ಮತ್ತು ಗುಣಲಕ್ಷಣವಾಗಿದೆ.

ಆದ್ದರಿಂದ "**ಮಚ್ಚೆಕುದುರೆಗಳ**" **("grisled horses")** ಈ ವರ್ಗದವರು ಸೈತಾನನ ಆತ್ಮವನ್ನು ಹೊಂದಿರುವವರನ್ನು ಸೂಚಿಸುತ್ತದೆ – ಇವರು

**ಬೇಕೆಂದೇ ಅವಿಧೇಯರಾಗಿರುತ್ತಾರೆ ಮತ್ತು ನೀತಿಗೆ ವಿರುದ್ಧವಾಗಿ ದಂಗೆ ಏಳುವವರಾಗಿದ್ದಾರೆ.**

ಈಗ ನಾವು ಈ ರಥವು ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂದು ನೋಡೋಣ –

**ಜೆಕರ್ಯ 6:6 “.....ಮಚ್ಚೆ ಮಚ್ಚೆಯ ಕುದುರೆಗಳು ದಕ್ಷಿಣದೇಶಕ್ಕೆ ಹೋದವು.”**

ಇಲ್ಲಿ ನಾವು ಗಮನಿಸಲೇಬೇಕಾದ ವಿಷಯವೇನೆಂದರೆ ಈ ರಥಗಳಲ್ಲಿ **(grisled)** **"ಮಚ್ಚೆ ಮಚ್ಚೆಯ ಕುದುರೆಗಳು"** ಮಾತ್ರ **"ದಕ್ಷಿಣ ದೇಶಕ್ಕೆ"** ಹೋಗುವದನ್ನು ನೋಡುತ್ತೇವೆ.

ಆದರೆ **"ಬಲವಾದ ಕುದುರೆಗಳು"** **("bay horses")** ಇದರಲ್ಲಿ ಸೇರಲಿಲ್ಲ ಎಂದು ನೋಡುತ್ತೇವೆ!!

**ಇದು ಹೀಗೇಕೆ?**

ಏಕೆಂದರೆ ರಕ್ಷಣೆಯ ಯಾವುದೇ ಜೀವ ಸ್ವಭಾವವನ್ನು ಪಡೆದುಕೊಳ್ಳುವದಿಲ್ಲ ಎಂದು ಈ **"ಬಲವಾದ ಕುದುರೆಗಳು"** **("bay horses")** ಸೂಚಿಸುತ್ತದೆ.

ಆದರೆ ಇವರು ಕೆಳಗಿನ ವಾಕ್ಯದಲ್ಲಿ ಕೊಟ್ಟಿರುವ ದಂಡನೆಯನ್ನು ಪಡೆದುಕೊಳ್ಳುವರು ಎಂದು ನೋಡುತ್ತೇವೆ –

**ಮತ್ತಾಯ 25:41,46**

**“ಆಮೇಲೆ ಆತನು ಎಡಗಡೆಯಲ್ಲಿರುವವರಿಗೆ - ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ.”**

**“ಮತ್ತು ಇವರು ನಿತ್ಯಶಿಕ್ಷೆಗೂ ಹೋಗುವರು.”**




ಹೌದು! ಈ **"ನಿತ್ಯ ಶಿಕ್ಷೆ"** ಅಥವಾ ನಿತ್ಯಮರಣ –

(ಏಕೆಂದರೆ ದೇವರು ಪಾಪಮಾಡಿದರೆ ಅದಕ್ಕೆ ಕೊಡುವ ಸಂಬಳ ಯಾವಾಗಲೂ ಮರಣವೇ – **ರೋಮಾಪುರದವರಿಗೆ** – 6:23)

ಇದನ್ನೇ "ಎರಡನೆಯ ಮರಣ" ಎಂದು ಕೆಳಗಿನ ವಾಕ್ಯದಲ್ಲಿ ಹೇಳಲಾಗಿದೆ –

**ಪ್ರಕಟನೆ 21:8**

**"....ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು ಎಂದು ನನಗೆ ಹೇಳಿದನು."**

ಹೌದು! ಈ "**ಎರಡನೆಯ ಮರಣ**"ವು ಒಂದು ಜೀವಿಯ ನಿತ್ಯನಾಶನವಾಗಿದೆ.

**ಈಗ ಈ 'ಗ್ರಿಸಲ್ಡ್ ಕುದುರೆ'ಗಳ ("grisled horses") ಹೋಗುವ ದಿಕ್ಕಿಗೆ ಏನು ಅರ್ಥವನ್ನು ಕೊಡುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ –

**ಕೀರ್ತನೆಗಳು 89:11,12**

**"ಆಕಾಶವು ನಿನ್ನದು, ಭೂಮಿಯೂ ನಿನ್ನದೇ..... ಉತ್ತರವನ್ನೂ ದಕ್ಷಿಣವನ್ನೂ ನೀನೇ ನಿರ್ಮಿಸಿದ್ದೀ."**




ಹೌದು! "ಉತ್ತರ"ವು ಆಕಾಶವನ್ನು ಸೂಚಿಸುತ್ತದೆ ಮತ್ತು "ದಕ್ಷಿಣ"ವು ಭೂಮಿಯನ್ನು ಸೂಚಿಸುತ್ತದೆ ಎಂದು ನೋಡುತ್ತೇವೆ.

ಈ ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಮತ್ತೆ ನೋಡುತ್ತೇವೆ –

**ಜೆಕರ್ಯ 14:4**

**"ಯೆರೂಸಲೇಮಿಗೆ ಮೂಡಲಲ್ಲಿ ಎದುರಾಗಿರುವ ಎಣ್ಣೆಯ ಮರಗಳ ಗುಡ್ಡದ ಮೇಲೆ ಆತನ ಪಾದಗಳು ನಿಂತಿರಲು ಆ ಗುಡ್ಡವು ಮೂಡಲಿಂದ ಪಡುವಲಿಗೆ ಉದ್ದಕ್ಕೂ**

ಸೀಳಿಹೋಗಿ ಮಧ್ಯದಲ್ಲಿ ದೊಡ್ಡ ಡೊಂಗರವಾಗುವದು; ಗುಡ್ಡದ ಅರ್ಧಭಾಗವು ಬಡಗಲಿಗೆ, ಅರ್ಧಭಾಗವು ತೆಂಕಲಿಗೆ ಸರಿದುಕೊಳ್ಳುವದು."

ಇಲ್ಲಿ "ಎಣ್ಣೆಯ ಮರಗಳ ಗುಡ್ಡವು" ದೇವರ ರಾಜ್ಯವನ್ನು ಸೂಚಿಸುತ್ತದೆ. ಮತ್ತು ಎರಡು ಭಾಗಗಳಾಗಿ ವಿಂಗಡವಾಗಿದೆ –

**"ಬಡಗಲಿಗೆ"** → ಇದು "ನೂತನ ಆಕಾಶಗಳ" ಆತ್ಮೀಕ ಆಳ್ವಿಕೆಯನ್ನು ಸೂಚಿಸುತ್ತದೆ.

**"ತೆಂಕಲಿಗೆ"** → ಇದು "ಹೊಸ ಭೂಮಿಯ" ಶಾರೀರಿಕ ಆಳ್ವಿಕೆಯನ್ನು ಸೂಚಿಸುತ್ತದೆ.

**ಆದ್ದರಿಂದ, "ದಕ್ಷಿಣವು" ಭೂಮಿಯನ್ನು ಸೂಚಿಸುತ್ತದೆ!**

ಆದ್ದರಿಂದ ಈ "ಮಚ್ಚೆ ಮಚ್ಚೆಯ ಕುದುರೆಗಳು" ("grisled horses") ಎಂಬದು ಅಪರಿಪೂರ್ಣತೆ ಮತ್ತು ಪಾಪದ ಸ್ಥಿತಿಯಲ್ಲಿರುವ ಎಲ್ಲಾ ಮನುಷ್ಯಜಾತಿಯನ್ನು ಸೂಚಿಸುತ್ತದೆ ಮತ್ತೆ ಇವರು ಪಶ್ಚಾತ್ತಾಪ ಪಟ್ಟು ಸುಧಾರಣೆ ಹೊಂದಿ ದೇವರ ಕಡೆಗೆ ತಿರುಗಿಕೊಳ್ಳುತ್ತಾರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆಗಳು 22:27,28**

"ಭೂಮಂಡಲದವರೆಲ್ಲರು ಎಚ್ಚರಗೊಂಡು ಯೆಹೋವನ ಕಡೆಗೆ ತಿರುಗಿಕೊಳ್ಳುವರು; [ಯೆಹೋವನೇ,] ಎಲ್ಲಾ ಜನಾಂಗಗಳವರು ನಿನಗೆ ಅಡ್ಡಬೀಳುವರು. ರಾಜ್ಯವು ಯೆಹೋವನದೇ; ಎಲ್ಲಾ ಜನಾಂಗಗಳಿಗೂ ಆತನೇ ಒಡೆಯನು."



ಹೌದು! ಅದ್ದರಿಂದ ಅವರು ಭೂಮಿಯ ರಕ್ಷಣೆಯ ಜೀವವನ್ನು ಪರಿಪೂರ್ಣ ಮಾನವ ಸ್ವಭಾವದಲ್ಲಿ ಪಡೆಯುವರು.

➡ ಕೊನೆಯದಾಗಿ, ಈ ದರ್ಶನದ ಮುಕ್ತಾಯವನ್ನು – 8ನೇ ವಾಕ್ಯದಲ್ಲಿ ನೋಡುತ್ತೇವೆ –

**ಜೆಕರ್ಯ 6:8**

**"ಆಮೇಲೆ ಅವನು ನನಗೆ - ಆಹಾ, ಉತ್ತರದೇಶಕ್ಕೆ ಹೋದವುಗಳು ಅಲ್ಲಿ ನನ್ನ ಕೋಪವನ್ನು ಶಾಂತಿಗೊಳಿಸಿವೆ ಎಂದು ಕೂಗಿ ಹೇಳಿದನು."**

☞ **ಇದರ ಅರ್ಥವೇನು?**

ಇದು ಈ ವರ್ಗದ ಮೇಲೆ ದೇವರಿಗಿರುವ ವಿಶೇಷವಾದ ಪ್ರೀತಿಯನ್ನು ಕುರಿತು ಮಾತನಾಡುತ್ತದೆ – ಅವರೇ ಚಿಕ್ಕಹಿಂಡು ಮತ್ತು ಇವರನ್ನು ಕುರಿತು ಹೀಗೆ ಸೂಚಿಸಲಾಗಿದೆ –

➡ "....ದೇವರಾದುಕೊಂಡ ವಂಶದವರೂ.... ಪರಿಶುದ್ಧ ಜನಾಂಗವೂ." (1 ಪೇತ್ರ 2:9)

**ನೀತಿಗಾಗಿ ಮತ್ತು ಪ್ರೀತಿಗಾಗಿ ಅವರಿಗಿರುವ ಉತ್ಸಾಹದ ನಿಮಿತ್ತ ದೇವರು ಬಹಳ ಸಮಾಧಾನಗೊಂಡಿದ್ದಾನೆ (ಸಾಂತ್ವನ ಗೊಂಡಿದ್ದಾನೆ)**

ಈ ವರ್ಗದವರನ್ನು ಕುರಿತು ಮತ್ತೆ ನಾವು ಹೀಗೆ ಓದುತ್ತೇವೆ –

**ಕೀರ್ತನೆಗಳು 33:12**

**"ಯಾವ ಜನರಿಗೆ ಯೆಹೋವನೇ ದೇವರಾಗಿದ್ದಾನೋ ಯಾವ (ಪರಿಶುದ್ಧ) ಜನಾಂಗದವರನ್ನು ಸ್ವಕೀಯರನ್ನಾಗಿ ಆದುಕೊಂಡಿದ್ದಾನೋ ಅವರೇ ಧನ್ಯರು."**

ಹೌದು! "ವಧು"ವರ್ಗದ – ಚಿಕ್ಕಹಿಂಡು ಮಾತ್ರವೇ –

➡ ದೇವರ ಸ್ವಕೀಯ ಜನರಾಗಿರುವರು!!

ಹೌದು! ದೈವೀಕಸ್ವಭಾವದಲ್ಲಿ ದೇವರ ವಿಶೇಷ ಕುಟುಂಬದವರಾಗಿದ್ದಾರೆ.

ಈಗ ಕೊನೆಯದಾಗಿ ನಾವು ಸ್ವತಃ ದೇವರೇ ಸಾವಿರ ವರುಷದ ಕೊನೆಯಲ್ಲಿ ಎಲ್ಲಾ ಮನುಷ್ಯಜಾತಿಗೂ ಕೊಡುವಂತಹ ಕೊನೆಯ ಬಹುಮಾನವನ್ನು ಕುರಿತು ಮಾತನಾಡುವದನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ –

**ಯೆಶಾಯ 19:25**

**"ನನ್ನ ಪ್ರಜೆಯಾದ ಐಗುಪ್ತಕ್ಕೂ ನನ್ನ ಸೃಷ್ಟಿಯಾದ ಅಶ್ಶೂರಕ್ಕೂ ನನ್ನ ಸ್ವಾಸ್ತ್ಯವಾದ ಇಸ್ರಾಯೇಲಿಗೂ ಶುಭವಾಗಲಿ ಎಂದು ಸೇನಾಧೀಶ್ವರನಾದ ಯೆಹೋವನು ಅವುಗಳನ್ನು ಆಶೀರ್ವದಿಸಿದ್ದಾನಷ್ಟೆ."**

ಇಲ್ಲಿ ಕ್ರಮವು ತಲೆಕೆಳಗಾಗಿದೆ – ಕೊನೆಯಿಂದ ಮೊದಲಿಗೆ –
ಒಳಂಪಿಕ್ಸ್ ಆಟದ ಬಹುಮಾನ ವಿಸ್ತರಣೆಯ ವೇದಿಕೆಯಂತಿದೆ!!

ಹಾಗೆಯೇ ಇಲ್ಲಿಯೂ ಸಹ ಮೂರನೆಯ ಬಹುಮಾನವನ್ನು ಮೊದಲು ತಿಳಿಸಲಾಗಿದೆ!!



**"ನನ್ನ ಪ್ರಜೆಯಾದ ಐಗುಪ್ತಕ್ಕೂ ಶುಭವಾಗಲಿ..."**

ಇಲ್ಲಿ "ಐಗುಪ್ತ" ಎಂದರೆ ಮನುಷ್ಯಜಾತಿಯು ಮೊದಲು ಗುಲಾಮತನ (ಬಂಧನ)ವೆಂಬ ಪಾಪ ಮತ್ತು ಮರಣದಲ್ಲಿದ್ದರು.

**ಆಗ ಅವರು ದೇವರ 'ಜನ'ರಾಗಿರುವರು!!**



ಈಗ ನಾವು ಎರಡನೆಯ ಬಹುಮಾನವನ್ನು ಕುರಿತು ಓದೋಣ

**"ಮತ್ತು ನನ್ನ ಸೃಷ್ಟಿಯಾದ (ಕೈಕೆಲಸದ) ಅಶ್ಶೂರಕ್ಕೂ"**

**ಈ "ಅಶ್ಶೂರ" ಎಂದರೇನು ಅರ್ಥ?**

**"ಏದೆನ್ನಿನ ನಾಲ್ಕು ನದಿಗಳು" ಎಂಬ ಅಭ್ಯಾಸ ( # 26)ರನ್ನು ನೆನಪಿಸಿಕೊಳ್ಳಿರಿ?**

ಅಲ್ಲಿ, ನಾವು ಮೂರನೆಯ ನದಿಯಾದ – ಹಿದ್ದೆಕೆಲ್ (ಅಥವಾ ಟೈಗ್ರಿಸ್ ನದಿ) ನದಿಯನ್ನು ನೋಡುತ್ತೇವೆ ಅದು ಅಶ್ಶೂರ್ ದೇಶದ ಮುಂದೆ (ಪೂರ್ವಕ್ಕೆ) ಹರಿಯುವದು.

ಆ ಮೂರನೆಯ ನದಿಯು ಪೂರ್ವಿಕರ – ಮೂರನೆಯ ಪುನರುತ್ಥಾನವನ್ನು ಸೂಚಿಸುತ್ತದೆ!

ಆದ್ದರಿಂದ ಇಲ್ಲಿಯೂ ಸಹ ಎಂದರೆ ಹೇಬೆಲನನ್ನು ಮೊದಲುಗೊಂಡು ಸ್ನಾನಿಕನಾದ ಯೋಹಾನನವರೆಗೆ ಇರುವ ಪೂರ್ವಿಕರನ್ನು ಸೂಚಿಸುತ್ತದೆ – ಇವರನ್ನು ಹೀಗೆ ಕರೆಯಲಾಗುತ್ತದೆ –

"ನನ್ನ ಸೃಷ್ಟಿಯಾದ (ಕೈಕೆಲಸದ) ಅಶ್ಶೂರ".

ಇದು ಅವರ ಜೀವಿತದಲ್ಲಿ ವಿಶಿಷ್ಟವಾದ ಕೆಲಸಗಳನ್ನು ಅವರ ಮುಖಾಂತರ ವ್ಯಕ್ತವಾಗುವದನ್ನು ಸೂಚಿಸುತ್ತದೆ –

ಅಪರಿಪೂರ್ಣ ಶರೀರದಲ್ಲಿ ಅವರಿಗೆ ವಿವಿಧ ಶೋಧನೆಗಳ ಮೂಲಕ ಅವರನ್ನು ಸಿದ್ಧಪಡಿಸಿದನು.

.....ನಂತರ ಅವರನ್ನು ಆಶೀರ್ವಾದದ ಸಾಧನವಾಗಿ ಉಪಯೋಗಿಸಿಲ್ಪಡುವರು ಮತ್ತು ಪರಿಪೂರ್ಣ ಮಾನವ

ಶರೀರದಲ್ಲಿ "ದೇಶದಲ್ಲೆಲ್ಲಾ (ಲೋಕದಲ್ಲೆಲ್ಲಾ) ರಾಜರಾಗಿರುವರು" ಎಂದು

ಕೀರ್ತನೆಗಳ 45:16ರಲ್ಲಿ ಓದುತ್ತೇವೆ – "ವಂಶ ಪಾರಂಪರ್ಯವಾಗಿ ಬಂದ ಸ್ಥಾನದಲ್ಲಿರುವದಕ್ಕೆ ನಿನಗೆ ಮಕ್ಕಳು ಹುಟ್ಟುವರು; ಅವರನ್ನು ದೇಶದಲೆಲ್ಲಾ ಅಧಿಕಾರಿಗಳನ್ನಾಗಿ (ರಾಜರಾಗಿ) ನೇಮಿಸುವಿ."

ಮತ್ತೆ ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ....

**ದಾನಿಯೇಲನು** 12:3 – "...ಬಹು ಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವವರು ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು."

ಮತ್ತು ಕೊನೆಯದಾಗಿ, ಮೊದಲನೆಯ ಬಹುಮಾನವನ್ನು ಕುರಿತು ನಾವು ಹೀಗೆ ಓದುತ್ತೇವೆ –



"....ನನ್ನ ಸ್ವಾಸ್ತ್ಯವಾದ ಇಸ್ರಾಯೇಲಿಗೂ"

ಈ "ಇಸ್ರಾಯೇಲ್" ಎಂಬುದು ಶಾರೀರಿಕವಾದ ಇಸ್ರಾಯೇಲ್ ದೇಶದವರನ್ನು ಸೂಚಿಸುವದಿಲ್ಲ.

ಆದರೆ ಇದು "ದೇವರ ಇಸ್ರಾಯೇಲ್ಯ"ರನ್ನು ಸೂಚಿಸುತ್ತದೆ (ಗಲಾತ್ಯದವರಿಗೆ 6:16) ಇವರೇ ಮಹಿಮೆಯುಳ್ಳ ಕ್ರಿಸ್ತನ ಶರೀರ – ಮಹಿಮೆಯುಳ್ಳ ಸಭೆ –

"ಆತನ ಸ್ವಾಸ್ತ್ಯದವರು"

**ದೇವರ ವಿಶೇಷವಾದ ಕುಟುಂಬದವರು!!**

**ಆದ್ದರಿಂದ ಇವುಗಳೇ ಆ ನಾಲ್ಕು ರಥಗಳು ಮತ್ತು ಅದರ ಸಂಕೇತಗಳಾಗಿವೆ!!**

ಕೊನೆಯದಾಗಿ, ನಾವು ಮೊದಲ "**ಕೆಂಪು ಕುದುರೆಗಳುಳ್ಳ**" ರಥವನ್ನು ಕುರಿತು ನೋಡೋಣ. ಅವುಗಳಿಗೆ ಯಾವು ದಿಕ್ಕು ಇಲ್ಲ.

**ಹಾಗಾದರೆ, ಈ ಪೂರ್ವಿಕರ ಬಹುಮಾನ ಏನಿರಬಹುದು?**

ನಮಗೆಲ್ಲರಿಗೂ ತಿಳಿದಿರುವಂತೆ ಅವರಿಗೆ ಪರಿಪೂರ್ಣ ಶರೀರದೊಂದಿಗೆ "**ಶ್ರೇಷ್ಠ ಪುನರುತ್ಥಾನ**"ವನ್ನು ಹೊಂದುವರು (**ಇಬ್ರಿಯರಿಗೆ** 11:35) ಮತ್ತು 1000 ವರ್ಷಗಳ ಯುಗದ ಕೊನೆಯಲ್ಲಿ ನಾವು ನೋಡುವದೇನೆಂದರೆ –

**......ಎಲ್ಲಾ ವಿಧೇಯರಾದ ಮನುಷ್ಯಜಾತಿಯು ಕ್ರಮೇಣವಾಗಿ (GRADUALLY) ಮಾನವ ಪರಿಪೂರ್ಣತೆಯನ್ನು ಹೊಂದುವರು!!**

ಆದ್ದರಿಂದ, ಈ ನಂಬಿಗಸ್ತರಾದ ದೇವರ ಸೇವಕರಿಗೆ ಯಾವ ಬಹುಮಾನ ಸಿಕ್ಕುವದು?

ಸತ್ಯವೇದವು ನಮಗೆ "ಉತ್ತರ" ಅಥವಾ "ದಕ್ಷಿಣ" ದಿಕ್ಕು ಎಂದು ತಿಳಿಸುತ್ತಿಲ್ಲ!! ಆದ್ದರಿಂದ ಒಬ್ಬ ವ್ಯಕ್ತಿ ಅವರ ರಕ್ಷಣೆಯನ್ನು ಹೀಗೆ ತೆಗೆದುಕೊಳ್ಳಬಹುದು –

**ನಿಜವಾಗಿ ಶುದ್ಧ ಆತ್ಮೀಕ ರಕ್ಷಣೆಯೂ ಅಲ್ಲ ("ಉತ್ತರ ದೇಶ")**

**.....ನಿಜವಾಗಿ ಶುದ್ಧ ಭೂಮಿಯ ರಕ್ಷಣೆಯೂ ಅಲ್ಲ ("ದಕ್ಷಿಣ ದೇಶ")**

ಇವರು ಯಾವ ರಕ್ಷಣೆಯನ್ನು ಪಡೆಯುವರೆಂದರೆ –

ಲೋಕದ ಪರಿಪೂರ್ಣ ಮನುಷ್ಯಜಾತಿಗಿಂತ ಹೆಚ್ಚು ಮತ್ತು

**....ಅದರೂ ಪರಲೋಕದ ಆತ್ಮೀಕ ಜೀವಿಗಳಿಗಿಂತ ಕಡಿಮೆ!!**

**ದೇವರ ಆತ್ಮೀಕ ರಾಯಭಾರಿಗಳಾಗಿರುವರು**

[ (ಅಂದರೆ ಅವರು ಶರೀರದಲ್ಲಿದ್ದುಕೊಂಡು, ಅದೇ ಸಮಯದಲ್ಲಿ ಆತ್ಮದಲ್ಲಿ ವ್ಯಕ್ತವಾಗುವದಕ್ಕೆ ಶಕ್ತಿಯನ್ನು (ಅಧಿಕಾರವನ್ನು) ಹೊಂದಿರುತ್ತಾರೆ). ]

"**ಮುಂದಣ ಯುಗಗಳಲ್ಲಿ**" ಬೇರೆ ಗ್ರಹಗಳ ಸೃಷ್ಟಿಕಾರ್ಯಗಳು ಆರಂಭವಾಗುವಾಗ ಅವರು ಭೂಮಿಯಿಂದ ಬೇರೆಗ್ರಹಗಳಿಗೆ ಪ್ರಯಾಣ ಮಾಡುವರು.

(**ಎಫೆಸದವರಿಗೆ** 2:7)

ಇದು ದೇವರು ತನ್ನ ಏಳನೆಯ ವಿಶ್ರಾಂತಿ ದಿನವನ್ನು ಮುಗಿಸಿದ ನಂತರ ನಡೆಯುವದು!!

**ಓಹ್! ನಿಜವಾಗಿಯೂ ದೇವರ ರಹಸ್ಯ ಯೋಜನೆಗಳು ಮಹತ್ತರವಾಗಿದೆ!!**






For Private Circulation Only

NOT FOR SALE

**Jesus Loves** *Ministry*

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

You Tube SUBSCRIBE TO OUR CHANNEL

Available Languages : Kannada, English, Hindi, Tamil and Telugu